# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 175 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 12.01.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 175 • PRGI No:KARKAN/2023/88055 • VIJAYANAGARA • 12.01.2025 • Sunday • Page:04 • Rs:2



BOOK YOUR ADVERTISEMENTS TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಹಂಪಿ ಟೈಮ್ಸ್ ಇ-ಪೇಪರ್

Boost your business growth this new year!
Happy Makar Sankranti
50% off
on print & Digital Package Advertisements*
*Conditions apply
94486 33038
Book a package advertisement now and grab an exclusive discount of up to 50%.
Make your promotions quick, impactful, and eye-catching with this limited-time offer!"
"ಸ್ಥಳೀಯ ಸುದ್ದಿಗಳು ಈಗ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಓದುಗರಿಗೂ ತಲುಪುತ್ತಿವೆ! ನಿಮ್ಮ ಬ್ರ್ಯಾಂಡನ್ನು ಗಡಿಗಳಾಚೆಗೆ ಹರಡುವ ಈ ವಿಶೇಷ ಅವಕಾಶವನ್ನು ಉಪಯೋಗಿಸಿಕೊಳ್ಳಿ!"
ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


ಮೈಕ್ರೋ ನ್ಯೂಸ್

## ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ ಮುಂದೂಡಿಕೆ

ಹಂಪಿ ಟೈಮ್ಸ್ ಬಳ್ಳಾರಿ
ಇದೇ ಜ.13 ರಂದು ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ನಡೆಸಲು ನಿಗದಿಪಡಿಸಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಉಸ್ತುವಾರಿ ಸಮಿತಿ "ದಿಶಾ" ಸಮಿತಿಯ ದ್ವಿತೀಯ ತ್ರೈಮಾಸಿಕ ಸಭೆಯನ್ನು ದಿಶಾ ಸಮಿತಿಯ ಅಧ್ಯಕ್ಷರ ಸೂಚನೆಯಂತೆ ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಹಾಗೂ ದಿಶಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ರಾಹುಲ್ ಶರಣಪ್ಪ ಸಂಕನೂರು ಅವರು ತಿಳಿಸಿದ್ದಾರೆ.


ಈ ಬಾರಿ ಫಲಿತಾಂಶ ನಮ್ಮದೆ SSLC ಮಾರ್ಗದರ್ಶಿಗಾಗಿ ಭೇಟಿ ನೀಡಿ..
www.hampitimes.com
epaper.hampitimes.com


# ಅನುದಾನರಹಿತ ಕನ್ನಡ ಶಾಲೆಗಳಿಗೆ ಮಹಾರಾಷ್ಟ್ರ ಮಾದರಿ ವೇತನ ನೀಡಿ

### ಕಲ್ಯಾಣ ಕರ್ನಾಟಕ ಕನ್ನಡ ಮಾಧ್ಯಮ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ ಆಗ್ರಹ




■ ಹಂಪಿ ಟೈಮ್ಸ್ ಕಂಪ್ಲಿ
ಕಲ್ಯಾಣ ಕರ್ನಾಟಕದ ಅನುದಾನರಹಿತ ಕನ್ನಡ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ವೇತಾನುದಾನಕ್ಕೆ ಒಳಪಡಿಸುವಂತೆ ಆಗ್ರಹಿಸಿ ಕಲ್ಯಾಣ ಕರ್ನಾಟಕ ಕನ್ನಡ ಮಾಧ್ಯಮ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ ಸಂಘದ ವಿಭಾಗೀಯ ಪದಾಧಿಕಾರಿಗಳು ಶುಕ್ರವಾರ ತಾಲೂಕಿನ ಎಮ್ಮಿಗನೂರಿನ ವೆಂಕಯ್ಯ ಮೆಮೊರಿಯಲ್ ಶಾಲೆಯಲ್ಲಿ ಶಾಸಕ ಜೆ.ಎನ್.ಗಣೇಶ್‌ಗೆ ಮನವಿ ಸಲ್ಲಿಸಿದರು.

ವಿಭಾಗೀಯ ಕೋಶಾಧ್ಯಕ್ಷ ಮುತ್ತಣ್ಣ ನಂದ್ಯಾಳ್ ಮಾತನಾಡಿ, ಆಂಗ್ಲ ಮಾಧ್ಯಮದ ಶಾಲೆಗಳ ಭರಾಟೆಯಲ್ಲಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ನಡೆಯುವುದೇ ದುಸ್ತರವಾಗಿದೆ. ಕಲ್ಯಾಣ ಕರ್ನಾಟಕದ ಕನ್ನಡ ಮರಿಚಿಕೆಯಾಗುವುದನ್ನು ತಪ್ಪಿಸಲು ಅನುದಾನರಹಿತ ಕನ್ನಡ ಶಾಲೆಗಳಿಗೆ ಅನುದಾನ ನೀಡಬೇಕಿದೆ. 1995ರ ನಂತರದ ಎಲ್ಲಾ ಕಲ್ಯಾಣ ಕರ್ನಾಟಕದ ಕನ್ನಡ ಮಾಧ್ಯಮ ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆಗಳ ಶಿಕ್ಷಕರಿಗೆ ವೇತಾನುದಾನ ನೀಡಿ ಇಲ್ಲವೇ ಮಹಾರಾಷ್ಟ್ರ ಮಾದರಿಯಲ್ಲಿ ಅರ್ಧ ವೇತನವನ್ನಾದರೂ ನೀಡಬೇಕು. ಕಲ್ಯಾಣ ಕರ್ನಾಟಕ ಕನ್ನಡ ಮಾಧ್ಯಮ ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆಗಳಿಗೆ 371ಜೆ ಅಡಿಯಲ್ಲಿ ಮೂಲ ಸೌಕರ್ಯ ನೀಡಬೇಕು. ನವೀಕರಣ ನಿಯಮಗಳಲ್ಲಿ ನಿಬಂಧನೆಗಳನ್ನು ಸಡಿಲಗೊಳಿಸಬೇಕು. ಸರ್ಕಾರಿ ಶಾಲೆಗಳಿಗೆ ನೀಡುವ ಸೌಲಭ್ಯಗಳನ್ನು ಅನುದಾನರಹಿತ ಶಾಲೆಗಳಿಗೆ ನೀಡಬೇಕು.

ವಿಭಾಗೀಯ ಗೌರವಾಧ್ಯಕ್ಷ ತಾಂಡವಕೃಷ್ಣ, ಜಿಲ್ಲಾಧ್ಯಕ್ಷ ಎಂ.ಸುರೇಶ್, ಪದಾಧಿಕಾರಿ ಕೆ.ಎಸ್. ಚಾಂದ್‌ಬಾಷ, ಸಿ.ವೆಂಕಟೇಶ್, ಎಚ್.ಸಿ. ರಾಮಕೃಷ್ಣ, ಕೆ.ಶಂಕ್ರಪ್ಪ, ರಾಘವೇಂದ್ರ ಶ್ರೇಷ್ಠಿ, ವಿರುಪಾಕ್ಷಿ, ಮಾರುತಿ ಸೇರಿ ಇತರರಿದ್ದರು.

ಆನಂದ ಬಾಣ





Events Coverage
Contact
M: 94486 33038


# ವಿಕಲಚೇತನರಲ್ಲೂ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ

### ಶ್ರೀ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಜಿ ಹೇಳಿಕೆ



■ ಹಂಪಿ ಟೈಮ್ಸ್ ಕೊಪ್ಪಳ
ವಿಕಲಚೇತನರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಯಾರಿಗೆ ಕಣ್ಣಿಲ್ಲ, ಕಿವಿ, ಕಾಲು ಮತ್ತು ಕೈಯಿಲ್ಲದಂತಹ ವಿಕಲಚೇತನರಿಗೆ ಸಮಾಜವು ನೋಡುವ ದುಷ್ಟಿಕೋನವೂ ಬದಲಾಗಬೇಕು ಎಂದು ಕೊಪ್ಪಳ ಶ್ರೀ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಜಿಗಳು ಹೇಳಿದರು.

ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಗವಿಮಠ, ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳು ಮತ್ತು ಹಲವಾರು ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಶನಿವಾರ ಕೊಪ್ಪಳ ನಗರದಲ್ಲಿ ಏರ್ಪಡಿಸಲಾಗಿದ್ದ "ವಿಕಲ ಚೇತನನ ನಡೆ ಸಕಲ ಚೇತನದ ಕಡೆ" ಎಂಬ ಕೃತಕ ಅಂಗಾಂಗ ಜೋಡಣೆ ಬೃಹತ್ ಜಾಗೃತಿ ನಡಿಗೆ ಕಾರ್ಯಕ್ರಮದ ನಂತರ ಗವಿಮಠ ಆವರಣದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಶ್ರೀಗಳು ಮಾತನಾಡಿದರು. ಯಾವುದೋ ಒಂದು ಅಪಘಾತ, ಪೂರ್ವಜನ್ಮದ ಕೃತವೂ ಕೆಲವರಲ್ಲಿ ಕೈ, ಕಾಲು, ಕಣ್ಣು, ಕಿವಿ ಹೀಗೆ ಏನೋ ನ್ಯೂನತೆಯಾಗಿರುತ್ತದೆ. ಮೊದಲು ಅವರಿಗೆ ಆತ್ಮಸ್ಥೈರ್ಯತೆಬೇಕು. ಇದರ ಜೊತೆಗೆ ಪ್ರೀತಿ, ಸಹನಾಭೂತಿಯೂ ಅತ್ಯವಶ್ಯಕವಾಗಿದೆ. ಪ್ರತಿ ವರ್ಷ ನಡೆಯುವ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವವು ಕೇವಲ ರಥೋತ್ಸವವಾಗಿ ನಡೆಯದೇ ಸಮಾಜಿಕ ಸಂದೇಶಗಳನ್ನು ಸಾರುತ್ತದೆ. ಇಂತಹ ಸಮಾಜಿಕ ಸಂದೇಶಗಳು ಕೇವಲ ಜಾಗೃತಿ ಅಭಿಯಾನಕ್ಕೆ ಮಾತ್ರ ಸೀಮಿತವಾಗದೇ ಕಾರ್ಯಗತವಾಗಬೇಕು ಎಂದರು.

ಈ ವರ್ಷ 'ವಿಕಲಚೇತನರ ನಡೆ ಸಕಲಚೇತನದ ಕಡೆ' ಎಂಬ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಮಕ್ಕಳಲ್ಲಿ ಸಹನಾಭೂತಿ, ವಿಕಲಚೇತನರ ಬಗ್ಗೆ ಪ್ರೇಮ ಬೆಳಸಿಕೊಳ್ಳುವುದಕ್ಕಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಜಾತ್ರೆಯಲ್ಲಿ ಕೃತಕ ಕೈ-ಕಾಲುಗಳಿಗಾಗಿ ಎಷ್ಟು ಜನ ನೋಂದಾಯಿಸಿಕೊಳ್ಳುತ್ತಾರೆ, ಅವರೆಲ್ಲರಿಗೂ ಉಚಿತವಾಗಿ ಕೃತಕ ಕೈ-ಕಾಲುಗಳ ಜೋಡಣೆ ಮಾಡಲಾಗುವುದು. ಶ್ರವಣ ನ್ಯೂನತೆಯುಳ್ಳ ವಿದ್ಯಾರ್ಥಿಗಳಿಗೆ ಶ್ರವಣ ಸಾಧನಗಳ ವಿತರಣೆ ಮಾಡಲಾಗುತ್ತಿದೆ. ಈ ಮಹತ್ತರ ಕಾರ್ಯಕ್ಕಾಗಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ, ಶ್ರೀ ಮಹಾವೀರ ಲಿಂಬ್ ಸಂಸ್ಥೆ, ರೆಡ್ ಕ್ರಾಸ್ ಸಂಸ್ಥೆಗಳು ಸಹಕಾರ ನೀಡಿವೆ. ಇವುಗಳ ಜೊತೆಗೆ ಕೈಜೋಡಿಸಲು ಹಲವಾರು ದಾನಿಗಳು ಸಹ ಮುಂದೆ ಬಂದಿದ್ದಾರೆ ಎಂದು ಹೇಳಿದರು.

ಕೈ, ಕಾಲು ಇಲ್ಲದವರಿಗೆ ಕೃತಕ ಕೈ, ಕಾಲು ಜೋಡಿಸುವುದು ಮಹತ್ತರವಾದ ಕಾರ್ಯವಾಗಿದೆ. ಅಜ್ಜನ ಜಾತ್ರೆಯ >>4

# ಜ.17, 18 ರಂದು ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲು ಸ್ವೀಕಾರ-ವಿಚಾರಣೆ

■ ಹಂಪಿ ಟೈಮ್ಸ್ ಬಳ್ಳಾರಿ
ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಜ.17 ಮತ್ತು 18 ರಂದು ಬಳ್ಳಾರಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ ನಡೆಸುವರು.

ಜ.17 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ ನಡೆಸುವರು. ಜಿಲ್ಲೆಯಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿ, ನೌಕರರಿಂದ ತಮಗೆ ಕಾನೂನು ರೀತ್ಯಾ ಆಗಬೇಕಾದ ಕೆಲಸದಲ್ಲಿ ವಿಳಂಬವೇನಾದರೂ ಆಗಿದ್ದರೆ ಅಥವಾ ಅಧಿಕಾರಿ, ನೌಕರರು ಯಾವುದೇ ತರಹದ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ, ಅದರಿಂದ ತೊಂದರೆಗೊಳಗಾದ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದು.

ಜ.18 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ) ತನಿಖೆ/ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಲ್ಲಿ (ಈ ಕಚೇರಿಯಿಂದ ನೋಟಿಸ್ ಕಳುಹಿಸಿರುವ) ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸುತ್ತಾರೆ. ಹಾಗಾಗಿ ದೂರುದಾರರು ಮತ್ತು ಎದುರುದಾರರು ನಿಗದಿತ ಸಮಯದಲ್ಲಿ ಹಾಜರಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ದರಾಜು.ಸಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ



ಹಂಪಿ ಉತ್ಸವ
ಫೆ.28, ಮಾ.1-2 | 2025

ಉತ್ಸವ ಹೇಗಿರಬೇಕು? ನೀವು ಬರೆದು ಕಳುಹಿಸಿ

ಹಂಪಿ ಉತ್ಸವದ ರೂವಾರಿ ದಿ.ಎಂ.ಪಿ.ಪ್ರಕಾಶ ಅವರ ಆಶಯದಂತೆ ಹಂಪಿ ಉತ್ಸವ ಆಚರಿಸಲು ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಉತ್ಸುಕರಾಗಿದ್ದಾರೆ. ಅದಕ್ಕೆ ಪೂರಕವಾಗಿ ಈಬಾರಿಯ ಹಂಪಿ ಉತ್ಸವ ಆಚರಣೆಗೆ ಈಗಾಗಲೇ ಜಿಲ್ಲಾಡಳಿತದಿಂದ ಸಿದ್ಧತೆಗಳು ಚುರುಕುಗೊಂಡಿರುವುದು ಹೆಮ್ಮೆಯ ಸಂಗತಿ.

ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಂಡಿದ್ದ ಅಂದಿನ ಅನೇಕ ವಿದೇಶಿಗರು ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಉತ್ಸವಗಳು ಕೇವಲ ಆಚರಣೆಗೆ ಸೀಮಿತಗೊಳ್ಳದೆ ಇತಿಹಾಸದ ಪುಟಗಳಲ್ಲಿ ದಾಖಲಾಗುವಂತೆ ಅರ್ಥಪೂರ್ಣ ಆಚರಣೆಗೆ ನಿಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಬರೆದು ಹಂಪಿ ಟೈಮ್ಸ್‌ಗೆ ಕಳುಹಿಸಿಕೊಡಿ, ನಿಮ್ಮ ಆಯ್ದ ಅಭಿಪ್ರಾಯಗಳು, ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಹಂಪಿ ಉತ್ಸವ ಅರ್ಥಪೂರ್ಣ ಆಚರಣೆಗೆ ನಿಮ್ಮಅಮೂಲ್ಯ ಸಲಹೆ, ಅಭಿಪ್ರಾಯಗಳು ಜಿಲ್ಲಾಡಳಿತಕ್ಕೆ ಸಮಂಜಸವೆನಿಸಿದರೆ ಆಯ್ಕೆ ಮಾಡಿಕೊಳ್ಳಲುಬಹುದು. ಇಂದೇ ನಿಮ್ಮ ಅಭಿಪ್ರಾಯಗಳನ್ನು ಪತ್ರಿಕೆಯ ಇ-ಮೇಲ್ ಗೆ ಕಳುಹಿಸಿರಿ.



www.hampitimes.com
epaper.hampitimes.com
hampitimes@gmail.com
@hampitimes
9448633038

ಹಂಪಿ ಟೈಮ್ಸ್
HAMPI TIMES

# ಬೆಳಕಿನ ಹಾದಿ

## ಸವ್ಯಸಾಚಿಯಂತೆ ಧೃಢತೆ-ಏಕಾಗ್ರತೆ



ವಿದ್ಯಾರ್ಥಿಗಳಿಗೆ, ಪರೀಕ್ಷಾರ್ಥಿಗಳಿಗೆ, ಇನ್ಯಾವುದೇ ಕೆಲಸದಲ್ಲಿರಲಿ ಅಲ್ಲಿ ಯಶ ಸಾಧನೆಗೆ, ದೃಢತೆ, ಕಲಿಕೆಗೆ ಏಕಾಗ್ರತೆ, ಮನಸ್ಸಿನ ಧೃಡಚಿತ್ತತೆ ಬೇಕೇ ಬೇಕಾಗುವುದು. ಏಕಾಗ್ರತೆ, ಧೃಢತೆಗೆ ಮತ್ತೊಂದು ಹೆಸರೇ, ಮಧ್ಯಮ ಪಾಂಡವನಾದ ಸವ್ಯಸಾಚಿ ಅರ್ಜುನ.

ನಮ್ಮ ಶಾಲೆಯಲ್ಲಿ ನಮ್ಮ ಮೇಷ್ಟು, ವಾರದ ಸಭೆಯಲ್ಲಿ, ಮತ್ತು ಪರೀಕ್ಷಾ ಸಮಯದಲ್ಲಿ ಹೇಳುತ್ತಿದ್ದ ಅರ್ಜುನನ ಧೃಢತೆ, ಏಕಾಗ್ರತೆಯ ಕಥೆಯ ಬರಹ ರೂಪವಿದು. ಪಾಂಡು ಮಹಾರಾಜ-ಕುಂತಿದೇವಿಯ ಮಕ್ಕಳಾದ ಧರ್ಮರಾಯ, ಭೀಮಸೇನ, ಪಾರ್ಥ, ನಕುಲ-ಸಹದೇವ. ಇವರುಗಳು ಗುರು ದ್ರೋಣಾ ಚಾರ್ಯರ ಬಳಿ ಇತರೇ ವಿದ್ಯಾರ್ಥಿಗಳೊಂದಿಗೆ ಬಿಲ್ವಿದ್ಯೆ, ಶಬ್ದವೇದಿಯಂತಹ ಕ್ಷಾತ್ರವಿದ್ಯೆಗಳನ್ನು ಕಲಿಯುತ್ತಿದ್ದ, ವಿದ್ಯಾರ್ಥಿದೆಸೆಯಲ್ಲಿದ್ದ ಸಮಯ.

ಒಮ್ಮೆ ದ್ರೋಣಾಚಾರ್ಯರು, ತಮ್ಮ ಶಿಷ್ಯಂದಿರಿಗೆ ಬಿಲ್ವಿದ್ಯೆಗೆ ಬೇಕಾಗುವ ಏಕಾಗ್ರತೆಯ ಪರೀಕ್ಷೆ ಒಡ್ಡಿದರು. ಏನೆಂದರೆ, ಮರದಲ್ಲಿ ಕೂತಿದ್ದ ಪಕ್ಷಿಗೆ, ಬಾಣಬಿಟ್ಟು ಉರುಳಿಸುವದು. ದ್ರೋಣಾ ಚಾರ್ಯರು ತಮ್ಮ ಪ್ರತಿ ಶಿಷ್ಯಂದಿರನ್ನು ಕೇಳಿದ್ದು, 'ಮರದಲ್ಲಿ ಏನು ಕಾಣಿಸುತ್ತಿದೆ?' ಎಂದು. ಪ್ರತಿ ಶಿಷ್ಯರು ಒಬ್ಬೊಬ್ಬರಾಗಿ, "ಮರದಲ್ಲಿ ಹಣ್ಣು ಕಾಣಿಸುತ್ತಿದೆ, ಮರದಲ್ಲಿ ಎಲೆ ಇದೆ, ಹೂಗಳು ಕಾಣಿಸ್ತಿವೆ, ಕಾಯಿ ಕಾಣುತ್ತಿದೆ ಎಂದು, ಒಬ್ಬೊಬ್ಬರು ಒಂದೊಂದಾಗಿ ಹೇಳಿದರೆ, ಮತ್ತೂ ಕೆಲವರು "ಪಕ್ಷಿ ಕೂತಿರುವುದು ಕಾಣಿಸುತ್ತಿದೆ, ಹಕ್ಕಿ ರೆಕ್ಕೆ ಅಲ್ಲಾಡಿಸುತ್ತಿದೆ" ಎಂದು ಹೇಳಿದರು. ಅರ್ಜುನನ್ನು ಕೇಳಲಾಗಿ, "ಪಕ್ಷಿಯ ಕಣ್ಣಿನ ಹೊರತು ಮತ್ತೇನೂ ಕಾಣಿಸುತ್ತಿಲ್ಲ" ಎಂದನು.



ಪಕ್ಷಿಯನ್ನುಳಿದು 'ಹಣ್ಣು, ಎಲೆ, ಹೂ ಕಾಣಿಸುತ್ತಿದೆ', ಎಂದ ಉಳಿದವರು, ಪಕ್ಷಿಗೆ ಬಾಣ ಬಿಡಲಾಗಲಿಲ್ಲ. ಆದರೆ "ಪಕ್ಷಿಯ ಕಣ್ಣು ಮಾತ್ರ ಗೋಚರಿಸುತ್ತಿದೆ" ಎಂದು, ಪಕ್ಷಿಯ ಕಣ್ಣನ್ನು ಕೇಂದ್ರೀಕರಿಸಿ ಬಾಣ ಬಿಟ್ಟ ಅರ್ಜುನನು, ಪಕ್ಷಿಯನ್ನು ಹೊಡೆದುರುಳಿಸಿ, ಗುರುಗಳು ಒಡ್ಡಿದ ಏಕಾಗ್ರತೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದನು. ಬಿಲ್ವಿದ್ಯೆ ಪಾರಾಂಗತನಾಗಿ, ಎರಡೂ ಕೈಗಳಿಂದ ಬಿಲ್ಲು ಬಿಡುತ್ತಿದ್ದರಿಂದ, ಸವ್ಯಸಾಚಿಯಾಗಿ, ಸದಾ ವಿಜಯಿಶಾಲಿಯಾಗುತ್ತಿದ್ದ ಅರ್ಜುನನಿಗೆ "ಅತಿರಥ", "ವಿಜಯ" ಇತ್ಯಾದಿ ಹೆಸರುಗಳು ಅನ್ವರ್ಥವಾಗಿದ್ದವು. ಅರ್ಜುನನಂತೆ ಏಕಾಗ್ರತೆ, ಏಕಚಿತ್ತತೆ ವಿದ್ಯಾಭ್ಯಾಸದಲ್ಲಿ ಪ್ರತಿ ವಿದ್ಯಾರ್ಥಿಗೂ ಅತ್ಯಗತ್ಯ. ಕೌಟುಂಬಿಕ ಸಂದರ್ಭಗಳನ್ನು ಹೊರತುಪಡಿಸಿ, ಬಾಹ್ಯಾಕರ್ಷಣೆಗಳಿಗೆ ಸಿಲುಕದೇ, ಅದರ ಬಗೆಗೆ ಗಮನ ನೀಡದೇ, ಅನಾವಶ್ಯಕ ಅಲೆದಾಟ ಕಡಿಮೆಗೊಳಿಸಿ, ಅವರ ವಿದ್ಯಾರ್ಥಿ ದೆಸೆಯಲ್ಲಿ ಜೊತೆಗೆ ಪರೀಕ್ಷಾ ಸಮಯದಲ್ಲಿ ಅನುಪಯುಕ್ತ ಎನಿಸುವ ಜಾಲತಾಣಗಳ ಬಲೆಯ ಗೀಳಿಗೆ ಸಿಲುಕದೇ, ಧೃಡ ಚಿತ್ತರಾಗಿ, ಏಕಾಗ್ರತೆಯಿಂದ ತಮ್ಮ ಶಿಕ್ಷಣ ಅಭ್ಯಾಸ ಕ್ರಮಗಳಲ್ಲಿ ತೊಡಗಿಸಿಕೊಂಡು ಯಶಸ್ಸು ಸಾಧಿಸಿದರೆ, ಅದೇ ನಾವು ಕಲಿಸಿದ ಗುರುಗಳಿಗೆ ಕೊಡುವ ಕಾಣಿಕೆ, ಗೌರವ. ತಂದೆ ತಾಯಿಯರಿಗೆ ಹೆಮ್ಮೆ. ಮಕ್ಕಳ ಆ ಯಶಸ್ಸೇ ತಂದೆ-ತಾಯಿಗಳಿಗೆ ಉಡುಗೊರೆಯಾಗುವುದು.

– ಲೀಲಾವತಿ ವಿಜಯಕುಮಾರ, ಅಂಕಸಮುದ್ರ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

-: ಸಂಪಾದಕರು :-
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಪರಮಹಂಸರ ಪರಮ ಶಿಷ್ಯ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರು

# ನನ್ನನ್ನೇ ನಿನ್ನ ಮಗುವಾಗಿ ಸ್ವೀಕರಿಸು ತಾಯಿ



"ಎದ್ದೇಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ" "ನಿಂತ ನೀರಿನಲ್ಲಿ ಕ್ರಿಮಿಗಳು ಹುಟ್ಟುತ್ತವೆ ಹಾಗೆ ಕೆಲಸವಿಲ್ಲದ ವ್ಯಕ್ತಿಯ ತಲೆಯಲ್ಲಿ ಕೆಲಸಕ್ಕೆ ಬಾರದ ವಿಚಾರಗಳು ಮೂಡುತ್ತವೆ."' " ಮಾರ್ಗದರ್ಶನ ನೀಡುವವರು ಇಲ್ಲದಿದ್ದರೇನು, ಹೊಸ ಮಾರ್ಗ ಸೃಷ್ಟಿಸುವ ಧೈರ್ಯ ತಾಕತ್ತು ನಿನ್ನಲ್ಲಿದ್ದರೆ ಇಡೀ ಜಗತ್ತು ನಿನ್ನೆಡೆಗೆ ತಿರುಗಿ ನೋಡುತ್ತದೆ."

ಇಂತಹ ಹಲವಾರು ಮೌಲ್ಯ ಭರಿತ ನುಡಿಗಳನ್ನು ನಾಡಿಗೆ ಕೊಟ್ಟವರು ಬೇರಾರು ಅಲ್ಲ, ಅವರೇ ನಮ್ಮ ಭಾರತೀಯ ಸಂಸ್ಕೃತಿಯನ್ನು ಸಾಗರದಾಚೆಗೆ ಸಾರಿ ಭಾರತೀಯ ಪರಂಪರೆ ಸಂಸ್ಕೃತಿಯನ್ನು ಇಡೀ ಜಗತ್ತಿಗೆ ಸಾರಿದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು.

ಸ್ವಾಮಿ ವಿವೇಕಾನಂದರು 1863 ಜನವರಿ 12ರಂದು ಕಲ್ಕತ್ತಾದಲ್ಲಿ ಜನಿಸಿದರು. ಇವರ ಮೊದಲ ಹೆಸರು ನರೇಂದ್ರನಾಥ ದತ್ತ. ವಿಶ್ವನಾಥ ದತ್ತ ಮತ್ತು ಭುವನೇಶ್ವರಿ ದೇವಿ ಇವರ ಪವಿತ್ರ ಉದರದಲ್ಲಿ ಜನಿಸಿದ ಇವರು, ಮುಂದೆ ಸ್ವಾಮಿ ವಿವೇಕಾನಂದ ಎಂದೇ ಪ್ರಸಿದ್ಧಿ ಪಡೆಯುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು ಕಲ್ಕತ್ತಾದಲ್ಲಿ ಪಡೆಯುತ್ತಾರೆ. ಉನ್ನತ ವ್ಯಾಸಂಗವನ್ನು ವಿದೇಶದಲ್ಲಿ ಪಡೆದು ಭಾರತಕ್ಕೆ ಮರಳಿದ ನಂತರ ಸಮಾಜ ಸೇವೆ ಮತ್ತು ಧರ್ಮದ ಸೇವೆಯತ್ತ ಮುಖ ಮಾಡುತ್ತಾರೆ.

ನರೇಂದ್ರನಾಥ ದತ್ತ ಬಾಲ್ಯದಲ್ಲಿಯೇ ತುಂಬಾ ಏಕಾಗ್ರತೆಯನ್ನು ಹೊಂದಿರುತ್ತಿದ್ದರು. ಅವರು ಧ್ಯಾನಕ್ಕೆ ಕುಳಿತರೆಂದರೆ ಬಾಹ್ಯ ಪ್ರಪಂಚದ ಅರಿವೆ ಅವರಿಗೆ ಇರುತ್ತಿರಲಿಲ್ಲ ಒಮ್ಮೆ ನರೇಂದ್ರ ಮತ್ತು ಆತನ ಸ್ನೇಹಿತರು ಧ್ಯಾನಕ್ಕೆ ಕುಳಿತಿದ್ದರು ಆತನ ಸ್ನೇಹಿತರು ತಮಾಷೆಗಾಗಿ ಆಗಾಗ ಕಣ್ಣು ತೆರೆದು ನೋಡುತ್ತಿದ್ದರು ಆಕಸ್ಮಿಕವಾಗಿ ಹಾವು ಒಂದು ಇವರತ್ತ ಬರುತ್ತಿತ್ತು ನರೇಂದ್ರರ ಸ್ನೇಹಿತರೆಲ್ಲ ಹಾವು, ಹಾವು ಎನ್ನುತ್ತಾ ಓಡಿದರು. ನರೇಂದ್ರಮಾತ್ರ ಕಣ್ಣು ತೆರೆಯುತ್ತಲೇ ಇಲ್ಲ. ಆಳವಾದ ಧ್ಯಾನದಲ್ಲಿದ್ದ ನರೇಂದ್ರನಾಥ ಹಾವು ಬಂದರು ಆತನಿಗೆ ಏನು ಮಾಡದೆ ವಾಪಸ್ ಹೋಯ್ತು. ಸ್ನೇಹಿತರೆಲ್ಲ ನರೇಂದ್ರ ಹಾವು ನರೇಂದ್ರ ಹಾವು ಎಂದು ಜೋರಾಗಿ ಕಿರುಚಿದರು, ಆತನಿಗೆ ಬಾಹ್ಯ ಪ್ರಪಂಚದ ಅರಿವಿರಲಿಲ್ಲ. ಎಷ್ಟೋ ಸಮಯದ ನಂತರ ಧ್ಯಾನದಿಂದ ಹೊರಗೆ ಬಂದ ಇವರಿಗೆ ವಿಷಯ ತಿಳಿಸಿದಾಗ ಅದ್ಯಾವ ಅರಿವು ಇರಲಿಲ್ಲ ಎಂದೇ ಹೇಳಿದ. ಅವರ ಆಳವಾದ ಏಕಾಗ್ರತೆಗೆ ಇದೊಂದು ನಿದರ್ಶನ ಮಾತ್ರ.



ಉಮಾ ಗವೀಶ ಕಲ್ಮಠ.
ಶಿಕ್ಷಕಿ, ಅಳವಂಡಿ.ಕೊಪ್ಪಳ

Scan For Digital Colourful
HAMPI TIMES E-paper

ಹೀಗೆ ಒಮ್ಮೆ ನರೇಂದ್ರನಿಗೆ ನೀನು ದೊಡ್ಡವನಾದ ಮೇಲೆ ಏನಾಗುತ್ತೀಯಾ ಎಂದು ಕೇಳಿದಾಗ ನರೇಂದ್ರ ಪಟ್ಟನೆ ನಾನು ಸಾರೋಟವನ್ನು ನಡೆಸುವವನಾಗುತ್ತೇನೆ ಎನ್ನುತ್ತಾನೆ. ಪ್ರಸಿದ್ಧ ವಕೀಲನಾಗಿರುವಂತಹ ಅವರ ತಂದೆ ತನ್ನ ಮಗ ವಿದೇಶದಲ್ಲಿ ವಿದ್ಯಾಭ್ಯಾಸ ಮುಗಿಸಿ ಒಳ್ಳೆಯ ರೀತಿಯಲ್ಲಿ ಬದುಕನ್ನು ಕಟ್ಟಿಕೊಳ್ಳ ಬೇಕೆಂದು ಬಯಸಿದ್ದರು. ಕೂಡಲೇ ನರೇಂದ್ರನ ತಾಯಿ ಮಗನನ್ನು ಕರೆದು ಮಹಾಭಾರತದಲ್ಲಿ ಶ್ರೀ ಕೃಷ್ಣನು ಸಾರೋಟವನ್ನು ನಡೆಸಿದ ಕಥೆ ಹೇಳುತ್ತಾ ಶ್ರೀ ಕೃಷ್ಣನಂತೆ ನೀನು ಜನರಿಗೆ ಮೌಲ್ಯಗಳನ್ನು ಬಿತ್ತುವ ಉತ್ತಮ ವ್ಯಕ್ತಿತ್ವ ಪಡೆದುಕೊಳ್ಳಬೇಕು ಎಂದಳು. ತಾಯಿಯ ಮಾತನ್ನು ಕೇಳಿದ ನಂತರ ದೇವರ ಬಗ್ಗೆ ಮತ್ತಷ್ಟು ಕುತೂಹಲ ಮೂಡಿತು. ನರೇಂದ್ರ ಎಲ್ಲರನ್ನು ಕೇಳುತ್ತಿದ್ದಿದ್ದು ಒಂದೇ 'ನೀವು ದೇವರನ್ನು ನೋಡಿದ್ದೀರಾ? ಎಂದು. ಒಮ್ಮೆ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದಾಗ ಗುರುಗಳು ಸಮಾಧಿ ಎಂಬ ಒಂದು ಶಬ್ದವನ್ನು ಹೇಳಲು ಆಗುತ್ತಿಲ್ಲ ನೀವು ಅದರ ಬಗ್ಗೆ ಮಾಹಿತಿ ಪಡೆಯಲು ದಕ್ಷಿಣೇಶ್ವರದಲ್ಲಿ ಪರಮಹಂಸ ಎಂಬ ಗುರುಗಳಿದ್ದಾರೆ, ತಾವು ಅಲ್ಲಿಂದ ಹೆಚ್ಚಿನದನ್ನು ತಿಳಿಯಬಹುದು ಎಂದಾಗ ತನ್ನ ಸ್ನೇಹಿತ ರೊಡಗೂಡಿ ದಕ್ಷಿಣೇಶ್ವರಕ್ಕೆ ಬಂದು ಪರಮಹಂಸರನ್ನು ಭೇಟಿಯಾಗುತ್ತಾರೆ, ಗುರುಗಳಿಗೆ ಅತೀವ ಆನಂದವಾಗುತ್ತದೆ.. ನರೇಂದ್ರ ಇಷ್ಟು ತಡವಾಗಿ ಏಕೆ ಬಂದೆ ಬೇಗನೆ ಬರಬೇಕಾಗಿತ್ತು, ಎಂದು ಆತನ ಕೈಗಳನ್ನು ಹಿಡಿದುಕೊಂಡು ಹೇಳಿದಾಗ ನರೇಂದ್ರನಿಗೆ ಅದು ಅರ್ಥವಾಗಲಿಲ್ಲ. ಅಗಾಧ ಜ್ಞಾನವನ್ನು ಹೊಂದಿದ ಪರಮಹಂಸರಿಗೆ ತಕ್ಕ ಶಿಷ್ಯ ದೊರಕಿದ್ದು ತುಂಬಾ ಸಂತೋಷವಾಯಿತು. ನಂತರದಲ್ಲಿ ಮಾತಾಡುತ್ತಾ, ನೀವು ದೇವರನ್ನು ನೋಡಿದ್ದೀರಾ ಎಂದು ಪ್ರಸ್ನಿಸುತ್ತಾನೆ, ಅದಕ್ಕೆ ಅವರು ನೋಡಿದ್ದೇನೆ ನಿನ್ನ ಜೊತೆ ಮಾತಾಡಿದಂತೆ ದೇವರೊಂದಿಗೂ ಮಾತನಾಡಿದ್ದೇನೆ ಎನ್ನುತ್ತಾರೆ. ನನಗೂ ದೇವರನ್ನು ತೋರಿಸಬೇಕೆಂದು ಬೇಡಿಕೊಳ್ಳುತ್ತಾನೆ, ಆಗ ನರೇಂದ್ರನನ್ನು ಒಂದು ಕೋಣೆಯಲ್ಲಿ ಕರೆದುಕೊಂಡು ಹೋಗಿ ಪರಮಹಂಸರು ತಮ್ಮ ಕಾಲನ್ನು ಆತನ ತಲೆಯ ಮೇಲಿಡುತ್ತಾರೆ ನರೇಂದ್ರನಿಗೆ ಮೈಯೆಲ್ಲೊಂದು ಮಿಂಚು ಮೂಡಿದಂತಾಗುತ್ತದೆ ತನ್ನನ್ನು ಬಿಟ್ಟುಬಿಡಲು ಕೇಳಿಕೊಳ್ಳುತ್ತಾರೆ ಆಗ ಪರಮಹಂಸರು ಇವತ್ತಿಗೆ ಇಷ್ಟು ಸಾಕು ಮತ್ತೆ ನೋಡೋಣ ಎಂದು ಕಳಿಸಿದರು ಕ್ರಮೇಣ ನರೇಂದ್ರ ಪರಮಹಂಸರ ಪ್ರೀತಿಯ ಭಾಂದವ್ಯ ಗಟ್ಟಿಯಾಗತೊಡಗಿತ್ತು.

ಮುಂದೆ ನರೇಂದ್ರನಾಥರ ತಂದೆ ವಿಶ್ವನಾಥ ದತ್ತರು ಅಕಾಲಿಕವಾಗಿ ಮರಣ ಹೊಂದಿದರು, ತಂದೆಯವರ ಸಾಲ ಮತ್ತು ಸಂಬಂಧಿಕರ ಸಾಲ ಕೊಡುವಂತೆ ಪೀಡಿಸುತ್ತಿದ್ದಾಗ ಇದೆಲ್ಲದರ ಪರಿಣಾಮ ನರೇಂದ್ರನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು ಅವೆಲ್ಲವುಗಳನ್ನು ನಿಭಾಯಿಸಿ ಗುರುಗಳ ಹತ್ತಿರ ಬಂದಾಗ ಪರಮಹಂಸರು ಕಾಯಿಲೆಗೆ ತುತ್ತಾಗಿದ್ದರು. ಈಗ ಸಂಪೂರ್ಣವಾಗಿ ಗುರುಗಳ ಸೇವೆಯನ್ನು ಮಾಡಲು ತಮ್ಮನ್ನು ತೊಡಗಿಸಿಕೊಂಡರು. ಕೊನೆಗೆ ಪರಮಹಂಸರು ಆಶ್ರಮದ ಎಲ್ಲ ಜವಾಬ್ದಾರಿಗಳನ್ನು ನರೇಂದ್ರನಿಗೆ ಒಪ್ಪಿಸಿದರು. ಅತ್ಯಂತ ಬುದ್ಧಿವಂತನಾದ ಚತುರನಾದ ನರೇಂದ್ರ ಮುಂದೆ ಸ್ವಾಮಿ ವಿವೇಕಾನಂದ ಎಂದೇ ಪ್ರಸಿದ್ಧಿ ಹೊಂದಿದರು.

ಅಮೇರಿಕಾದ ಚಿಕಾಗೋದಲ್ಲಿ ನಡೆಯುವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಹೋದಾಗ ಅದು ಇನ್ನು ಎರಡು ತಿಂಗಳಿಗೆ ನಡೆಯುತ್ತದೆ ಎಂಬ ವಿಷಯ ಗೊತ್ತಾಗಿ ಅಲ್ಲಿಂದ ಒಬ್ಬ ಪರಿಚಯಸ್ತರ ಮನೆಯಲ್ಲಿ ಉಳಿದುಕೊಳ್ಳಬೇಕಾಗುತ್ತದೆ ಅದಕ್ಕೆ ಒಂದು ಪರಿಚಯ ಪತ್ರ ಬರೆದು ಕೊಡಲು ಕೇಳಿಕೊಳ್ಳುತ್ತಾರೆ. ಇವರ ಜ್ಞಾನವನ್ನು ಕಂಡವರು ಭಾಗವಹಿಸಲು ಪರಿಚಯ ಪತ್ರ ಬರೆದುಕೊಡುತ್ತಾರೆ ಮುಂದೆ 1896 ಸೆಪ್ಟೆಂಬರ್ 11 ರಂದು ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಪಾಲ್ಗೊಳ್ಳುತ್ತಾರೆ. ಅಲ್ಲಿ ಇವರ ವೇಷಭೂಷಣ ಕಂಡು ಕೆಲವರು ನಗೆಯಾಡುತ್ತಾರೆ. ಭಾರತೀಯರು ಕಲ್ಲು ಮಣ್ಣಿನ ಮೂರ್ತಿಯನ್ನು ಪೂಜಿಸುವರು. ಅಂಧಕಾರದಲ್ಲಿರುವವರು ಎಂದು ಹಾಸ್ಯ ಮಾಡುತ್ತಿರುತ್ತಾರೆ. ಭಾರತೀಯರ ಪವಿತ್ರ ಗ್ರಂಥ ಭಗವದ್ಗೀತೆಯನ್ನು ತೀರಾ ಕೆಳಗೆ ಇಟ್ಟು ಉಳಿದ ದೇಶಗಳ ಪವಿತ್ರ ಗ್ರಂಥಗಳನ್ನುಮೇಲೆ ಇಟ್ಟಿರುತ್ತಾರೆ. ಸ್ವಾಮಿ ವಿವೇಕಾನಂದರಿಗೆ ಕೊನೆಯ ಭಾಷಣ ಸರದಿ ಗಂಭೀರವನರಾಗಿ ಸ್ವಾಮಿ ವಿವೇಕಾನಂದರು ವೇದಿಕೆಗೆ ಆಗಮಿಸುತ್ತಿದ್ದಂತೆ ಜನ ಗುಸು ಗುಸು ಮಾತನಾಡುತ್ತಿರುತ್ತಾರೆ. ಇವರು ಅಮೆರಿಕಾದ ನನ್ನ ಸಹೋದರ ಸಹೋದರಿಯರೇ ಎಂದ ಕೂಡಲೇ ಒಮ್ಮೆಲೇ ಎಲ್ಲರೂ ಶಾಂತರಾಗಿ ಎರಡು ನಿಮಿಷಗಳವರೆಗೆ ಚಪ್ಪಾಳೆ ತಟ್ಟುತ್ತಾರೆ. ಆಗಲೇ ಅವರೆಲ್ಲರಿಗೂ ಗೊತ್ತಾಗಿದ್ದು ಭಾರತೀಯರ ಸಂಸ್ಕಾರ. ವಿವೇಕಾನಂದರು ಭಾರತೀಯ ಸಂಸ್ಕೃತಿ ಆಚಾರ ವಿಚಾರಗಳನ್ನೆಲ್ಲ ಎಳೆ ಎಳೆಯಾಗಿ ವಿವರಿಸುತ್ತಾರೆ. ಇಡೀ ವಿಶ್ವಕ್ಕೆ ಭಾರತದ ಪರಂಪರೆಯ ಚಿತ್ರಣವನ್ನು ಮೂಡಿಸಿದಾಗ ಭಾರತದ ಬಗ್ಗೆ ಎಲ್ಲರಿಗೂ ಅಭಿಮಾನ ಮೂಡುತ್ತದೆ. ಒಬ್ಬರು ಅವರನ್ನು ಎಲ್ಲರ ಪವಿತ್ರ ಗ್ರಂಥಗಳ ಮೇಲಿದ್ದು ನಿಮ್ಮ ಗ್ರಂಥ ತೀರಾ ಕೆಳಗೆ ಇಟ್ಟಿದ್ದಕ್ಕೆ ನಿಮಗೆ ಬೇಜಾರಾಗಿಲ್ಲವೇ? ಎಂಬ ಪ್ರಶ್ನೆಗೆ ಖಂಡಿತ ಇಲ್ಲ. "ನನಗೆ ತುಂಬಾ ಸಂತೋಷವಾಗಿದೆ ಏಕೆಂದರೆ ಎಲ್ಲರ ಭಾರವನ್ನು ಹೊರುವ ತಾಕತ್ತು ನಮ್ಮ ದೇಶದ ಗ್ರಂಥಕ್ಕಿದೆ ಹಾಗೆ ಎಲ್ಲರ ಗ್ರಂಥಕ್ಕಿಂತ ನೀವು ನಿಮ್ಮ ಕೈಯಲ್ಲಿ ತೆಗೆದುಕೊಂಡಿದ್ದು ನಮ್ಮ ಗ್ರಂಥ ಮೊದಲು ತಾನೇ ಎಂದು ಉತ್ತರಿಸುತ್ತಾರೆ. ಮರುದಿನ ಬೆಳಿಗ್ಗೆ ಅಮೆರಿಕಾದ ಪತ್ರಿಕೆಗಳಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ, ಭಾಷಣದ ಬಗ್ಗೆ ವಿಷಯ ಬಿತ್ತರಗೊಂಡಿತ್ತು. ಎಲ್ಲರೂ ಅವರನ್ನು ಅಭಿನಂದಿಸಿದರು. ಇವರ ತೇಜಸ್ವಿ ಮುಖವನ್ನ ಮತ್ತು ದೈಹಿಕ ಸದೃಢತೆಯನ್ನು ಮತ್ತು ಇವರ ಕೀರ್ತಿಯನ್ನು ಕಂಡ ಅಲ್ಲಿಯ ಒಬ್ಬ ಮಹಿಳೆ ಇವರ ಬಳಿಗೆ ಬಂದು ತನ್ನ ಮೋಹವನ್ನು ಅವರಡೆಗೆ ವ್ಯಕ್ತಪಡಿಸುತ್ತಾಳೆ. ಸ್ವಾಮಿ ನನಗೆ ನಿಮ್ಮಂತೆ ಇರುವ ಮಗು ಬೇಕು ಎಂದು ಕೇಳಿದಾಗ ಸ್ವಾಮಿ ವಿವೇಕಾನಂದರು ಶಾಂತ ಚಿತ್ತರಾಗಿ ನಿರ್ಭಯದಿಂದ ಆ ಮಹಿಳೆಗೆ ನನ್ನನ್ನೇ ನಿನ್ನ ಮಗುವಾಗಿ ಸ್ವೀಕರಿಸು ತಾಯಿ ಎಂದು ಉತ್ತರಿಸುತ್ತಾರೆ. ನಂತರ ಆಕೆ ಮನಸ್ಸು ಪರಿವರ್ತನೆಗೊಂಡು ಆಕೆಯು ಕೂಡ ಸ್ವಾಮಿ ವಿವೇಕಾನಂದರ ಒಬ್ಬ ಶಿಷ್ಯೆಯಾಗುತ್ತಾಳೆ.

ಮುಂದೆ ಭಾರತಕ್ಕೆ ಬಂದ ಸ್ವಾಮಿ ವಿವೇಕಾನಂದರ ರಾಮಕೃಷ್ಣ ಮಿಷನ್ ಸ್ಥಾಪಿಸುವ ಮೂಲಕ ಗುರುವಿನ ತತ್ವಗಳನ್ನು ಮುನ್ನಡೆಸಿಕೊಂಡು ಬಂದರು ಅವರ ಶಿಷ್ಯ ಬಳಗ ಬೆಳೆಯಿತು. ಸ್ವಾಮಿ ವಿವೇಕಾನಂದರ ಮಾತುಗಳು ಇವತ್ತು ನುಡಿಮುತ್ತುಗಳಾಗಿ ಪರಿವರ್ತನೆ ಹೊಂದಿವೆ, ಒಮ್ಮೆ ತನ್ನ ಶಿಷ್ಯನೊಬ್ಬನನ್ನು ಕರೆದು ಪಂಚಾಂಗ ತರಲು ಹೇಳುತ್ತಾರೆ. ಅದರಲ್ಲಿ ಜುಲೈ 4ನ್ನು ಗುರ್ತಿಸುತ್ತಾರೆ. ಅವರು ಹೇಳಿದಂತೆ ಜುಲೈ 4ರಂದು ಅಸ್ತಂಗತರಾಗುತ್ತಾರೆ. ಭಾರತದಲ್ಲಿ ಉದಯಿಸಿದ ಸೂರ್ಯ ಅಂದು ಮುಳುಗಿ ಹೋದ ಮತ್ತೆ ಉದಯಿಸಲೇ ಇಲ್ಲ. ಆ ಸೂರ್ಯ ಜಗತ್ತಿಗೆ ಜ್ಞಾನದ ಜ್ಯೋತಿಯಾಗಿ ಬೆಳಕು ನೀಡಿದ ವೀರ ಸನ್ಯಾಸಿ ಅಮರರಾದರು. ಕೇವಲ 39 ವರ್ಷ ಐದು ತಿಂಗಳು 24 ದಿನಗಳಷ್ಟೇ ಬಾಳಿದವರು ಎಲ್ಲರ ಮನದಲ್ಲಿ ಜ್ಞಾನಜ್ಯೋತಿಯಾಗಿ ಬೆಳಗುತ್ತಿದ್ದಾರೆ. ಯುವಕರಿಗೆ ವಿಶೇಷವಾಗಿ ಧೈರ್ಯದಿಂದ ಬಾಳಲು ಸ್ವಾಭಿಮಾನದಿಂದ ಬದುಕಲು ಅವರು ಕರೆಕೊಟ್ಟಿದ್ದಾರೆ. ಅವರ ಆದರ್ಶಗಳನ್ನು ಪಾಲಿಸಿ. ಉತ್ತಮ ಬದುಕನ್ನು ಕಟ್ಟಿಕೊಳ್ಳೋಣ. ಸ್ವಾಮಿ ವಿವೇಕಾನಂದರು ಮತ್ತೆ ಈ ಪುಣ್ಯಭೂಮಿಯಲ್ಲಿ ಹುಟ್ಟಿ ಬರಲಿ.

# ಕಂಬಳ ಕ್ರೀಡೆ, ಕಲೆಗೆ ಜಾತಿ-ಧರ್ಮದ ಬೇಲಿ ಇಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ | ಕಂಬಳ ಅತ್ಯಂತ ಜನಪ್ರಿಯ ಗ್ರಾಮೀಣ ಕ್ರೀಡೆ | ಇದು ಸರ್ವರ ಸಂಭ್ರಮ






■ ಹಂಪಿ ಟೈಮ್ಸ್ ಮಂಗಳೂರು

ಕಂಬಳ ಕ್ರೀಡೆ ಮತ್ತು ಕಲೆಗೆ ಜಾತಿ-ಧರ್ಮದ ಬೇಲಿ ಇಲ್ಲ. ಇದು ಸರ್ವರ ಸಂಭ್ರಮ. ನಮ್ಮ ದೇಶ ಬಹುತ್ವದ ದೇಶ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಉಳ್ಳಾಲ ನರಿಂಗಾನದ ಮೂರನೇ ವರ್ಷದ ಲವ-ಕುಶ ಜೋಡುಕೆರೆ ಕಂಬಳೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು. ಜನಪದ ಕ್ರೀಡೆ ಕಂಬಳ ಸರ್ವ ಜಾತಿ ಧರ್ಮದ ಜನಸಮುದಾಯವನ್ನು ಬೆಸೆಯುವಂತೆ ಮಾಡುತ್ತಿದೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಭಾರತ ಸಂಸ್ಕೃತಿಯ ಒಂದು ಭಾಗ ಕರಾವಳಿ ಜಿಲ್ಲೆಗಳ ಸಂಸ್ಕೃತಿಯಾಗಿದೆ. ನಮ್ಮ ಸರ್ಕಾರ ಕೂಡ ಎಲ್ಲಾ ಜಾತಿ, ಎಲ್ಲಾ ಧರ್ಮದ ಪರವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಮಹಿಳೆಯರಿಗೆ ಆರ್ಥಿಕ ಶಕ್ತಿ ಕೊಡುವ ಮೂಲಕ ಕುಟುಂಬಗಳ ಮತ್ತು ಮಹಿಳಾ ಸಮಾಜದ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಇಡೀ ದೇಶದಲ್ಲಿ ಮೊದಲಿಗೆ ಕೊಟ್ಟಿದ್ದು ನಮ್ಮ ಸರ್ಕಾರ. ಆಶಾ ಕಾರ್ಯಕರ್ತೆಯರ ಬೇಡಿಕೆ ಈಡೇರಿಸಿ ಅವರು ಪ್ರತಿಭಟನೆ ಹಿಂತೆಗೆದುಕೊಳ್ಳುವಂತೆ ಮಾಡಿದ್ದು ನಮ್ಮ ಸರ್ಕಾರ. ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ 10 ಸಾವಿರ ಸಿಗುವಂತೆ ಮಾಡುವ ಜವಾಬ್ದಾರಿಯನ್ನು ನಮ್ಮ ಸರ್ಕಾರ ವಹಿಸಿಕೊಂಡಿದೆ ಎಂದರು.

ಸುಪ್ರೀಂಕೋರ್ಟ್ ನಿಷೇಧಿಸಿದ್ದ ಕಂಬಳ ಕ್ರೀಡೆಗೆ ಮರು ಚಾಲನೆ ಸಿಗುವಂತೆ ಮಾಡಿದ್ದು ನಮ್ಮ ಸರ್ಕಾರ. ಸುಪ್ರೀಂಕೋರ್ಟ್ ನಿಷೇಧವನ್ನು ತೆರವುಗೊಳಿಸಲು ಸರ್ಕಾರ ಶ್ರಮಿಸಿತು. ಇದು ಕರಾವಳಿಯ ಜನಪದ ಸಂಸ್ಕೃತಿಗೆ ನಮ್ಮ ಸರ್ಕಾರ ಕೊಟ್ಟ ಕೊಡುಗೆ ಎಂದರು.

ತಮ್ಮ ಮನೆ ಮಕ್ಕಳಂತೆ ಕೋಣಗಳನ್ನು ಸಾಕುತ್ತಾರೆ. ಕಂಬಳ ಕ್ರೀಡೆ ಜಿಲ್ಲೆಯ ಜನಪದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಹೀಗಾಗಿ ಈ ಸಾಂಪ್ರದಾಯಿಕ ಕ್ರೀಡೆಯನ್ನು ಉಳಿಸಲು ನಾನು ಮುಂದಾದೆ ಎಂದರು.

24 ಕಂಬಳಗಳನ್ನು ನಡೆಸಲು ಪ್ರತೀ ಕಂಬಳಕ್ಕೆ ತಲಾ 5 ಲಕ್ಷ ರೂಪಾಯಿ ನೆರವನ್ನು ನಮ್ಮ ಸರ್ಕಾರ ನೀಡಿದೆ. ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಸಚಿವ ರಹೀಂ ಖಾನ್ ಸೇರಿ ಹಲವು ಪ್ರಮುಖರು, ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ವೈಕುಂಟದ ನೋಟ

ಜನ್ಮಾಂತರಕೂ ದುರ್ಲಭವು ವೈಕುಂಠದ ನೋಟ
ಜಗದಾಧಾರ ಶ್ರೀ ಹರಿಯ ಲೀಲೆಯೇ ಈ ಆಟ
ಶಂಖ ಚಕ್ರ ಗಧಾಧಾರ
ಮಾಯಾಲೋಲನಿವನು
ಅನಂತಶಯನನು ನಮಗೆಲ್ಲ ಪರಮ ಪಾವನನು

ಯೋಗ ನಿದ್ರೆಯಲಿರುತ್ತಲೇ ಸೃಷ್ಟಿಯ ಸಂಕಲ್ಪ
ಅಗಣಿತವು ಈತನ ಮಹಿಮೆ ತಿಳಿಯಲು ಮತಿ ಅಲ್ಪ
ಸೃಷ್ಟಿಕರ್ತ ಬ್ರಹ್ಮ ನಾಭಿಯಿಂದಲೇ ಉಗಮ
ಬ್ರಹ್ಮಾಂಡದ ಚಾಲಕ ಶಕ್ತಿ ಈತನಿಂದಲೇ ಎಲ್ಲ ಸುಗಮ

ಅನವರತವು ಸಂದಿದೆ ಹರಿಗೆ ಶ್ರೀ ಲಕ್ಷ್ಮೀಯ ಸೇವೆ
ಇವರ ಕೃಪೆಯಿರದೆ ದಾಟುವುದೇ ಭವಸಾಗರದ ನಾವೆ
ಹರಿ ಸಾಯುಜ್ಯಕೆ ಬೇಕು ಅವಿರತ ದೃಢ ಭಕ್ತಿ
ಕಳೆಯಲಿ ಮೊದಲು ನಮ್ಮ ವಿಷಯಗಳಲ್ಲಿನ ಆಸಕ್ತಿ

ಕ್ಷೀರಸಾಗರದ ಅಲೆಗಳಂತೆ ಏರಿಳಿತವು ಜೀವಕೆ ಸಹಜ
ಮಾಯೆ ಕರ್ಮದ ಗತಿಯು ಗಹನವು ಅರಿಯಲು ಮನುಜ
ಹರಿ ಭಕುತಿಯಲಿ ಮಿಂದವಗೆ ಇರದು ಹಲವಾರು ಜನುಮ
ನಡೆಯುವ ವೈಕುಂಠದ ದಾರಿಯಲಿ ಪಠಿಸುತ ಹರಿ ನಾಮ

~ ಚೇತನ ಭಾರ್ಗವ, ಬೆಂಗಳೂರು

visit our website
www.hampitimes.com
epaper.hampitimes.com

# ಪಾಲಕರು ಈಗ ಎಚ್ಚೆತ್ತುಕೊಳ್ಳದಿದ್ದರೆ...

ಕೆಲವೊಮ್ಮೆ ಹಾಗನಿಸುವುದು ಸಹಜ ಮತ್ತು ಅದುವೇ ಸರಿ. ಇನ್ನೂ ಪ್ರಪಂಚವನ್ನ ನೋಡುವುದು ಒಂದುಕಡೆಯಿರಲಿ, ತನ್ನ ಸುತ್ತಮುತ್ತಲಿನ ಪರಿಸರವವನ್ನೂ ತನ್ನವರನ್ನು ಹೋಗಲಿ ತನ್ನ ಮನೆಯನ್ನೂ ಸರಿಯಾಗಿ ನೋಡಿರದ ಮಗುವೊಂದು..! ಅದು ಮೂರನೇ ತರಗತಿಯಲ್ಲಿ ಓದುತ್ತಿರುವ ಮಗುವೊಂದು ಹಠಾತ್ತನೆ ತನ್ನ ಶಾಲೆಯಲ್ಲಿ ಮನೆಕೆಲಸವದ ಪಟ್ಟಿಯನ್ನು ತೋರಿಸುವ ಸಂದರ್ಭದಲ್ಲಿ ಕುಸಿದುಬಿದ್ದು ಹೃದಯ ಸ್ತಂಬನಕ್ಕೆ ಒಳಗಾಗಿ ಸಾವಿಗೀಡಾಗುವುದು ಎಂದರೆ..?.

ದೆಹಲಿಯ ಪ್ರತಿಷ್ಟಿತ ಸ್ಕೂಲಿನ ಪ್ರಾಥಮಿಕ ಶಾಲೆಯ ಮಗುವೊಂದು ತನ್ನ ಸಹಪಾಠಿಯನ್ನು ಕ್ಷುಲ್ಲಕ ಕಾರಣಕ್ಕೆ ಮನೆಯಿಂದ ತನ್ನ ತಂದೆಯ ಬಂದೂಕನ್ನು ತಂದು ಶೂಟ್ ಮಾಡಿ ಸಾಹಿಸುವುದು ಎಂದರೆ..?.

ಈ ಮೇಲಿನ ಎರಡು ಘಟನೆಗಳ ವಿಚಾರವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಓದಿದಾಗ, ನೋಡಿದಾಗ ಒಂದು ಕ್ಷಣ ಕರುಳು ಚುರುಕ್ ಎನ್ನದೆ ಇರಲು ಸಾದ್ಯವೆ? ಇದರ ಜೊತೆಗೆ ಇಂತಹ ವಿಷಯಗಳನ್ನು ನಾವುಗಳು ಅಂದರೆ ಪ್ರಜ್ಞಾನವಂತ ಸಮಾಜ ತೆಗೆದುಕೊಂಡ ರೀತಿಯನ್ನು ನೋಡಿದಾಗ ಮತ್ತೊಂದು ರೀತಿಯಲ್ಲಿ ಹೃದಯ ಜಲ್ ಎನ್ನದೇ ಇರಲು ಸಾಧ್ಯವೇ ಇಲ್ಲ. ಅನಗತ್ಯವಾದ ಯಾರೋ ತಿಳಿದಂತವರು ಮಾಡಿದ ಅನ್ಯಾಯ, ಕೊಲೆ ಲೂಟಿಗಳನ್ನು, ಭ್ರಷ್ಟಾಚಾರಗಳ ಸುದ್ದಿಯನ್ನು ದಿನವಿಡೀ ತೋರಿಸುವ ದೃಷ್ಯ ಮಾಧ್ಯಮಗಳು, ಪತ್ರಿಕೆಗಳು, ಅಗತ್ಯವಾಗಿ ತೋರಿಸಲೇಬೇಕಾದ ಈ ಮೇಲಿನ ಎರಡು ಘಟನೆಗಳನ್ನು ಕೇವಲ ಸುದ್ದಿಗೆಂಬಂತೆ ತೋರಿಸಿ ಮುಂದುವರಿದಿದ್ದು, ಏಕೋ ನಮ್ಮ ಸಮಾಜ ಅಗತ್ಯಕ್ಕಿಂತ ಅನಗತ್ಯವಾದ ಅತೀರಂಜಿತವಾದ ವಿಚಾರಗಳತ್ತಲೆ ಹೆಚ್ಚಿನ ಆಸಕ್ತಿಯನ್ನು ತೋರಿದ್ದು ಒಪ್ಪಿಕೊಲ್ಲಲಾಗದು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ನಮ್ಮ ಭವ್ಯ ಭವಿಷ್ಯತ್ತಿನ ರೂವಾರಿಗಳೇ ನಮ್ಮ ಮಕ್ಕಳು ಎನ್ನುವುದು ಗೊತ್ತಿದ್ದೂ, ಪ್ರತಿಯೊಬ್ಬ ನಾಗರಿಕನೂ ತಾನು ಗಳಿಸುವ, ತಾನು ಉಳಿಸುವ, ಇವತ್ತಿನ ತನ್ನೆಲ್ಲ ಹೋರಾಟದ ಗುರಿಯೇ ತನ್ನ ಮಕ್ಕಳು ಅವರ ಆರೋಗ್ಯ ಮತ್ತು ಮುಂದಿನ ಅವರ ಭವಿಷ್ಯಕ್ಕೆಂದೆ ಅಲ್ಲವೇ? ಹಾಗಿದ್ದರೂ ಒಂದಿಲ್ಲೊಂದು ಕಾರಣಗಳಿಂದ ಆ ಮಕ್ಕಳ ಸುಂದರವಾದ ಭವಿಷ್ಯ ನಿಜಕ್ಕೂ ಸುದರವಾಗಿ ರೂಪಗೊಳ್ಳುತ್ತಿದಿಯೆ ಎನ್ನುವುದೇ ಪ್ರಶ್ನೆಯಾಗಿದೆ.

ಪ್ರತಿಯೊಬ್ಬ ಪೋಷಕರೂ ತಮ್ಮ ತಮ್ಮ ಮಕ್ಕಳ ಭವಿಷ್ಯದ ಹಸನಾದ ಬದುಕಿನ ಚಿಂತೆಯಲ್ಲಿ, ಸದ್ಯದ ಅವರ ಬಾಲ್ಯವನ್ನು ನರಕ ಮಾಡುತ್ತಿರುವುದರ



ಸಂಕೇತಗಳು ಆಗಾಗ ನಮಗೆ ಗೋಚರವಾಗುತ್ತಿದ್ದರೂ ಎಚ್ಚೆತ್ತುಕೊಲ್ಲದಿರುವುದು ಸೋಜಿಗವೇ ಸರಿ. ಯಾರಿಗೆ ಗೊತ್ತು ನಮ್ಮ ಸಮಾಜದ ಕಣ್ಣುತೆರೆಸಲು ಇನ್ನೂ ಎಷ್ಟು ಇಂತಹ ಸಾವು ನೋವುಗಳು ಸಂಭವಿಸಬೇಕೊ.

ಒಂಚೂರು ನಿಮ್ಮ ಚಿತ್ತ ಇತ್ತ ಹರಿಯಬೇಕಿದೆ ಪಾಲಕರೆ, ಈಗ ಎಚ್ಚೆತ್ತುಕೊಳ್ಳದ್ದಿದ್ದರೆ ಮುಂದೆಂದೂ ಅಂತಹ ಅವಕಾಶವೇ ನಿಮ್ಮ ಪಾಲಿಗೆ ಬರದಿರಬಹುದು/ಕಳೆದುಕೊಳ್ಳಬಹುದು, ಮುಂದುವರಿದು ಅದರ ಪರಿಣಾಮ ಕೇವಲ ಪಶ್ಚಾತ್ತಾಪ.. ಪಶ್ಚಾತ್ತಾಪ ... ವೇ ಆಗಿರುತ್ತದೆ.

ಒಮ್ಮೆ ನಿಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ? ಅವರೇಗೇನು ಬೇಕು? ನಿಜವಾಗಲೂ ನಿಮ್ಮ ಮಕ್ಕಳು ಖುಷಿಯಾಗಿದ್ದಾರೆಯೇ? ಅವರ ಬಾಲ್ಯವನ್ನು ಅವರು ಆನಂದದಿಂದ ಅನುಭವುಸುತಿದ್ದಾರೆಯೆ? ಅವರಿಗೆ ಪೋಷಕರಾದ ನೀವು ಸರಿಯಾಗಿ ಸಮಯವನ್ನು ನೀಡಿದ್ದೀರಿಯೇ, ನಿಮ್ಮ ಮಕ್ಕಳೊಟ್ಟಿಗೆ ಕುಳಿತು ಮಾತನಾಡಿದ್ದೀರಿ? ನಿಮ್ಮ ಮಕ್ಕಳ ಇಷ್ಟ-ಕಷ್ಟಗಳನ್ನು ಆಲಿಸುವ ಮನಸ್ಸು ಮಾಡಿದ್ದೀರಿ ಎನ್ನುವುದನ್ನು ಪುನರ್ ಪರಿಶೀಲಿನೆ ಮಾಡಿಕೊಳ್ಳಿ. ಆಗ ಮಾತ್ರ ನಿಮ್ಮ ಮಕ್ಕಳ ಅತಿರೇಕದ, ಅತಿ ಒತ್ತಡದ, ಅಸಹಜವಾದ ವರ್ತನೆಗೆ ಕಾರಣಗಳನ್ನು ಕಂಡುಕೊಳ್ಳಬಹುದಾಗಿದೆ. ಮಕ್ಕಳ ಆರೋಗ್ಯ ಬಲು ಸೂಕ್ಷ್ಮ ಮತ್ತು ನಾಜುಕನ ವಿಚಾರವಾಗಿರುವುದರಿಂದ ಇತ್ತ ಹರಿಯಬೇಕಿದೆ ನಿಮ್ಮ ಚಿತ್ತ.

ಮಕ್ಕಳ ಆರೋಗ್ಯ ಕಾಪಾಡುವುದು ಹೇಗೆ? ನುರಿತ ವೈದ್ದರೊಬ್ಬರ ಅನಿಸಿಕೆಯನ್ನು ಗಮನಿಸುವುದಾದರೆ. ಮೊದಲು ನಿಮ್ಮ ಮಕ್ಕಳ ಜಡ ಜೀವನಶೈಲಿ ಹಾಗೂ ಆಹಾರ ಕ್ರಮದಿಂದಾಗಿ ಮಕ್ಕಳಲ್ಲಿ ಸಹಜವಾಗಿ ಒತ್ತಡ ಮತ್ತು ಹೃದಯ ಸಂಬಂದಿಯಂತಹ ಸಮಸ್ಯೆಗಳು ಕಂಡುಬರುವುದು ಇಂದಿನ ಸಮಾಜದಲ್ಲಿ ಸಾಮಾನ್ಯ ಎನ್ನುವಂತಾಗಿದೆ.

ಒಂದು ಕಡೆ ಅತಿರೇಕದ ವರ್ತನೆಗಳು, ಅತೀ ಚಟುವಟಿಕೆಯ, ಅನಾವಶ್ಯಕ ಭಯ, ಉದ್ವೇಗ ಕಂಡುಬಂದರೆ, ಇನ್ನೊಂದು ಕಡೆಗೆ ಅತಿಯಾದ ಜಡತ್ವ, ಆಹಾರ ಪದ್ದತಿಯಲ್ಲಿನ ಬದಲಾವಣೆಯಿಂದಾಗಿ ಅಧಿಕ ರಕ್ತದೊತ್ತಡ ಮತ್ತು ಬೊಜ್ಜಿನ ಸಮಸ್ಯೆಗಳು ಮಕ್ಕಳಲ್ಲಿ ಏರಿಕೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಇದರಿಂದಾಗಿ ಚಿಕ್ಕ ಮಕ್ಕಳಲ್ಲಿಯೇ ಹೃದಯದ ಸಮಸ್ಯೆಗಳು ಕಂಡುಬರುತ್ತಿವೆ. ಇದಕ್ಕೆ ನಮ್ಮ ಅನಾರೋಗ್ಯಕರ ಆಹಾರ ಕ್ರಮ ಮತ್ತು ನಮ್ಮ ಜಡ ಜೀವನಶೈಲಿಯೇ ಪ್ರಮುಖ ಕಾರಣವೆಂದು ಎನ್ನಲಾಗಿದೆ. ಹಾಗಾಗಿ ಪೋಷಕರಾದ ನಾವುಗಳು ಇತ್ತ ಕಡೆ ನಮ್ಮ ಚಿತ್ತವನ್ನು ಹರಿಸಬೇಕಿದೆ.

ಉತ್ತಮ ಪೋಷಕಾಂಶಗಳಿರುವ ಉಪಾಹಾರವು ಮಕ್ಕಳ ದೇಹಕ್ಕೆ ಶಕ್ತಿ ನೀಡುವುದಲ್ಲದೆ ಅವರಲ್ಲಿ ಪ್ರತಿರೋಧಕ ಶಕ್ತಿಯನ್ನು ವೃದ್ಧಿಸುವಂತೆ ಮಾಡುತ್ತದೆ. ಹೆಚ್ಚು ಹೆಚ್ಚು ಪ್ರೋಟೀನ್ ಮತ್ತು ನಾರಿನಾಂಶವು ಒಳ್ಳೆಯ ಆಹಾರವನ್ನು ನೀಡುವುದರ ಕಡೆಗೆ ಗಮನ ಹರಿಸಿ.

**1. ಸಮತೋಲಿತ ಆಹಾರವನ್ನು ನೀಡಿ**
**2. ಮಕ್ಕಳನ್ನು ಹೆಚ್ಚು ಹೆಚ್ಚು ಆಟವಾಡಲು ಬಿಡಿ**
**3. ನಿರಂತರವಾಗಿ ಮಕ್ಕಳ ಆರೋಗ್ಯವನ್ನೂ ತಪಾಸಣೆ ಮಾಡಿಸಿ.**
**4.ಮಕ್ಕಳಿಗಾಗಿ ಸಮಯವನ್ನು ಮೀಸಲಿಡಿ, ಅವರೊಟ್ಟಿಗೆ ಹೆಚ್ಚು ಬೆರೆಯಿರಿ.**
**5.ಮಕ್ಕಳನ್ನು ಸಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಿ.**

ನಮ್ಮ ಮಕ್ಕಳ ಪ್ರತೀ ಚಟುವಟಿಕೆಯ ಮೇಲಿಯೂ ನಿಗಾ ವಹಿಸುವುದು ಮುಖ್ಯವಾಗಿರುತ್ತದೆ. ಮಕ್ಕಳಲ್ಲಿ ಹಠ, ಸಿಟ್ಟು, ಸೆಡವು ಎಲ್ಲವೂ ಸಾಮಾನ್ಯವೇ. ಆದರೆ ಅದನ್ನು ಹತೋಟಿಯಲ್ಲಿಟ್ಟು ಅವರಿಗೆ ಜೀವನ ಕೌಶಲ್ಯಗಳನ್ನು ಅಳವಡಿಸಿಕೊಳ್ಳಲು ಸಹಕರಿಸಬೇಕು. ಬೆಳೆಯುತ್ತಿರುವ ಮಕ್ಕಳ ಮೇಲೆ ಸದಾ ಒಂದು ಕಣ್ಣು ಇಟ್ಟಿರುವುದು ಅತೀ ಮುಖ್ಯವಾಗಿರುತ್ತದೆ. ಏಕೆಂದರೆ ನವಯುಗದ ಜೀವನ ಶೈಲಿಯಲ್ಲಿ ಅಪ್ಪ ಅಮ್ಮ ಕೆಲಸಕ್ಕೆ ಹೋದರೆ ಮನೆಯಲ್ಲೇ ಇರುವ ಮಕ್ಕಳು ಏನು ಮಾಡುತ್ತಾರೆ ಎಂದು ತಿಳಿಯುವುದಿಲ್ಲ. ಮಕ್ಕಳಿಗೆ ಕೇಳಿದ್ದನ್ನೆಲ್ಲಾ ಕೊಡಿಸಬೇಡಿ, ನಿಮ್ಮ ಮಕ್ಕಳಿಗೆ ಮನೆಯಲ್ಲಿನ ಹಿರಿಯರನ್ನು ಗೌರವವಿಸುವುದನ್ನು ಕಲಿಸಿ, ನೀವು ಅವರೊಟ್ಟಿಗೆ ಇದ್ದಾಗ ಹಾಗೆಯೇ ನೆಡೆದುಕೊಳ್ಳಿ.

ಈ ವಿಚಾರದಲ್ಲಿ ಮುಖ್ಯವಾಗಿ ಪಾಲಕರು, ಶಿಕ್ಷಕರು ಮತ್ತು ಸಮಾಜ ತನ್ನ ಜವಾಬ್ದಾರಿಯನ್ನು ಮತ್ತೊಮ್ಮೆ ದೃಡಪಡಿಸಿಕೊಳ್ಳಬೇಕಾದ ಸಮಯ ಬಂದಿದೆ, ಜೊತೆಗೆ ಸಮಾಜಿಕ ಮಾಧ್ಯಮಗಳು ತನ್ನ ತತ್ವ ನಿಷ್ಠೆಗಳನ್ನು ಸಮಾಜದ ಕುರಿತ ತನ್ನ ಬದ್ದತೆಯನ್ನು ವಸ್ತುನಿಷ್ಠವಾಗಿ ಪ್ರದರ್ಶಿಸಬೇಕಾಗಿದೆ. ಹೀಗೆ ಮಕ್ಕಳ ದೈಹಿಕ ಆರೋಗ್ಯ ಮತ್ತು ಮಾನಸಿಕ ಸ್ಥಿರತೆಯನ್ನು ಕಂಡುಕೊಳ್ಳುವಲ್ಲಿ ಈಗಲಾದರೂ ಸಹಕರಿಸಿ, ಕೊಂಚ ಸಂಯಮದಿಂದ ಮಕ್ಕಳೊಂದಿಗೆ ಪ್ರತಿಕ್ರಿಯಿಸಿ, ಮುದಿನ ಆರೋಗ್ಯಯುತ ಜನಾಂಗಕ್ಕೆ ಭದ್ರ ಬುನಾದಿಯನ್ನು ಈಗಲೇ ಕಂಡುಕೊಳ್ಳಿ ಇದು ಸದ್ಯದ ನಾಗರಿಕ ಸಮಾಜದ ಕಳವಳ ಮತ್ತು ಕಳಕಳಿ.

# ರೋಗ ಹರಡುವ ಈಡಿಸ್ ಸೊಳ್ಳೆಗಳು ಮೊಟ್ಟೆ ಇಡದಂತೆ ಜಾಗ್ರತೆ ವಹಿಸಿ

## ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲಾ ಸೂಚನೆ



■ ಹಂಪಿ ಟೈಮ್ಸ್ ಬಳ್ಳಾರಿ

ಸಾರ್ವಜನಿಕರು ತಮ್ಮ ಮನೆಯ ಹೊರಗಿನ ನೀರು ಸಂಗ್ರಹಕಗಳಿಗೆ ಸರಿಯಾಗಿ ಮುಚ್ಚಳ ಮುಚ್ಚುವ ಮೂಲಕ ಈಡಿಸ್ ಸೊಳ್ಳೆಗಳು ಮೊಟ್ಟೆ ಇಡದಂತೆ ಜಾಗ್ರತೆ ವಹಿಸಬೇಕು ಎಂದು ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ. ಅಬ್ದುಲ್ಲಾ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣ ವಿಭಾಗದ ಸಹಕಾರದಲ್ಲಿ ಲಾರ್ವಾ ಸಮೀಕ್ಷಾ ಕಾರ್ಯದ ವಿಶೇಷ ಅಭಿಯಾನದ ಹಿನ್ನೆಲೆಯಲ್ಲಿ ನಗರದ ಕಾಟಿಗುಡ್ಡ ವ್ಯಾಪ್ತಿಯಲ್ಲಿ ಶುಕ್ರವಾರ ಮನೆ ಭೇಟಿಯ ಸಮಿಕ್ಷಾ ಕಾರ್ಯ ಪರಿಶೀಲಿಸಿ ಅವರು ಮಾತನಾಡಿದರು.

ಡೆಂಗ್ಯು ರೋಗ ಹರಡುವ ಈಡಿಸ್ ಸೊಳ್ಳೆಗಳ ಸಂತತಿ ನಿರ್ಮೂಲನೆ ಮಾಡಲು ಪ್ರತಿಯೊಬ್ಬರೂ ಮನೆಯ ಸುತ್ತಲೂ ನೀರು ನಿಲ್ಲದಂತೆ ಸ್ವಚ್ಚವಾಗಿಟ್ಟುಕೊಳ್ಳಬೇಕು. ಈ ಮೂಲಕ ಡೆಂಗ್ಯು ರೋಗ ಹರಡುವ ಈಡಿಸ್ ಇಜಿಪ್ಟೈ ಸೊಳ್ಳೆಗಳ ಉತ್ಪತ್ತಿಯನ್ನು ತಡೆಯಲು ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಡೆಂಗ್ಯು ಪ್ರಕರಣಗಳು ಗಣನೀಯ ನಿಯಂತ್ರಣವಾಗಿದ್ದು, ವಿಶೇಷವಾಗಿ ನೀರು ಸಂಗ್ರಹಕಗಳಾದ ಡ್ರಮ್ ಬ್ಯಾರಲ್, ಕಲ್ಲಿನ ಡೋಣಿ, ಸಿಮೆಂಟ್ ತೊಟ್ಟಿ ಮುಂತಾದ ವುಗಳನ್ನು ವಾರದಲ್ಲಿ ಒಮ್ಮೆ ಚೆನ್ನಾಗಿ ತಿಕ್ಕಿ ತೊಳೆದು ನೀರು ತುಂಬುವುದಕ್ಕೆ ಆದ್ಯತೆ ನೀಡಬೇಕು ಎಂದರು. ಸ್ವಚ್ಚಗೊಳಿಸಲು ಸಾಧ್ಯವಿಲ್ಲದ ಪರಿಕರಗಳಿಗೆ ಟೆಮಿಫಾಸ್ ದ್ರಾವಣವನ್ನು ಹಾಕಲು ಸಹಕರಿಸಬೇಕು. ಅಲ್ಲದೆ ಈ ಖಾಯಿಲೆಗೆ ನಿರ್ದಿಷ್ಟ ಚಿಕಿತ್ಸೆ ಇಲ್ಲದಿರುವುದರಿಂದ ಜ್ವರ, ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಮುಂತಾದವು ಕಂಡು ಬಂದರೆ ತಡ ಮಾಡದೆ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಎನ್ ವಿಬಿಡಿಸಿಪಿ ಜಿಲ್ಲಾ ಸಲಹೆಗಾರರು ಪ್ರತಾಪ್, ಆರೋಗ್ಯ ನಿರೀಕ್ಷಣಾಧಿಕಾರಿ ಶರತ್, ಚೇತನ್, ಪ್ರಾಥಮಿಕ ಅರೋಗ್ಯ ಸಂರಕ್ಷಣಾಧಿಕಾರಿ ಶ್ರೀಲಕ್ಷ್ಮೀ, ಮಲೇರಿಯಾ ಲಿಂಕ್ ವರ್ಕರ್ ಸೋಮಶೇಖರ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಕೌಶಲ್ಯವಿದ್ದರೆ ಮಾತ್ರ ಸ್ವಯಂ ಉದ್ಯೋಗ ಸಾಧ್ಯ

## ಎಸ್.ಎಲ್.ಆರ್ ಕಂಪನಿಯ ಸಿ.ಎಸ್.ಆರ್ ವಿಭಾಗದ ಮುಖ್ಯಸ್ಥ ರಾಘವಾಂಕ ಕೆ.ಎಸ್. ಅಭಿಮತ



ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಆರು ತಿಂಗಳ ಕಾಲ ಉಚಿತ ಹೊಲಿಗೆ ಯಂತ್ರ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಹೊಲಿಗೆ ಯಂತ್ರ ಮತ್ತು ಪ್ರಮಾಣ ಪತ್ರಗಳನ್ನ ವಿತರಿಸಲಾಗಿದೆ.
– ರಾಘವಾಂಕ ಕೆ.ಎಸ್.
ಸಿ.ಎಸ್.ಆರ್ ವಿಭಾಗದ ಮುಖ್ಯಸ್ಥ

■ ಹಂಪಿ ಟೈಮ್ಸ್ ಹೊಸಪೇಟೆ

ಕೌಶಲ್ಯ ಅಭಿವೃದ್ಧಿಗಳಿಂದ ಮಾತ್ರ ಸ್ವಯಂ ಉದ್ಯೋಗ ಕಂಡುಕೊಳ್ಳುವುದಕ್ಕೆ ಸಾಧ್ಯ ಎಂದು ಎಸ್.ಎಲ್.ಆರ್ ಕಂಪನಿಯ ಸಿ.ಎಸ್.ಆರ್ ವಿಭಾಗದ ಮುಖ್ಯಸ್ಥ ರಾಘವಾಂಕ ಕೆ.ಎಸ್ . ಅಭಿಪ್ರಾಯ ಪಟ್ಟರು. ಅವರು ಹಗರಿಬೊಮ್ಮನಹಳ್ಳಿ ತಾಲೂಕಿನ ನಾರಾಯಣದೇವರಕೆರೆ ಗ್ರಾಮದಲ್ಲಿ ಬುಧವಾರ ವಾಲ್ಮೀಕಿ ಭವನದಲ್ಲಿ ಎಸ್. ಎಲ್.ಆರ್ ಮೆಟಾಲಿಕ್ಸ್ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ (ರಿ) ಇವರ ಸಹಯೋಗದಲ್ಲಿ 6 ತಿಂಗಳ ಕಾಲ ಉಚಿತ ಹೊಲಿಗೆ ಯಂತ್ರ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಹೊಲಿಗೆ ಯಂತ್ರ ವಿತರಣೆ ಮಾಡಿ ಮಾತನಾಡಿದರು.

ಮಹಿಳೆ ಸ್ವಯಂ ಉದ್ಯೋಗ ಪಡೆದುಕೊಂಡಾಗ ಇಡೀ ಕುಟುಂಬವನ್ನು ಆರ್ಥಿಕ ಸಂಕಷ್ಟದಿಂದ ದೂರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಮಹಿಳೆಯರು ಸ್ವಯಂ ಉದ್ಯೋಗದ ಮೂಲಕ ಸಬಲೀಕರಣರದಾಗ ಮಾತ್ರ ದೇಶ >>4

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 68 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

## ಅರ್ಥಶಾಸ್ತ್ರ ಅಧ್ಯಾಯ 31 – ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ

**1) ಲೋಕಸಭೆಯಲ್ಲಿ ಕೇಂದ್ರ ಆಯ-ವ್ಯಯವನ್ನು ಮಂಡಿಸುವವರು ಯಾರು?**
ಉತ್ತರ : ಕೇಂದ್ರ ಹಣಕಾಸು ಸಚಿವರು

**2) ಭಾರತದ ಹಣಕಾಸು ವರ್ಷದ ಅವದಿ ಯಾವುದು?**
ಉತ್ತರ : ಏಪ್ರಿಲ್ 1 ರಿಂದ ಮಾರ್ಚ್ 31 ರ ವರೆಗೆ

**3) ಮುಂಗಡ ಪತ್ರ (ಆಯ-ವ್ಯಯ) ಎಂದರೇನು?**
ಉತ್ತರ: ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ..

**4). ತೆರಿಗೆ ಎಂದರೇನು?**
ಉತ್ತರ : ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆ

**5) ಪ್ರಗತಿಪರ ತೆರಿಗೆ ನೀತಿ ಎಂದರೇನು?**
ಉತ್ತರ : ಸರ್ಕಾರವು ಶ್ರೀಮಂತರ ಮೇಲೆ ಹೆಚ್ಚು ತೆರಿಗೆಯನ್ನು ಹಾಗು ಬಡವರ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸುತ್ತದೆ. ಈ ನೀತಿಯನ್ನು ಪ್ರಗತಿಪರ ತೆರಿಗೆ ನೀತಿ ಎನ್ನುತ್ತಾರೆ.

**6) ಕೊರತೆಯ ಆಯವ್ಯಯ ಎಂದರೇನು?**
ಉತ್ತರ : ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿರುವುದನ್ನು ಕೊರತೆಯ ಆಯವ್ಯಯ ಎನ್ನುವರು

**7) ಕೋಶಿಯನೀತಿ ಅಥವಾ ವಿತ್ತೀಯನೀತಿ ಎಂದರೇನು?**
ಉತ್ತರ : ಆರ್ಥಿಕ ಅಭಿವೃದ್ಧಿ ಮತ್ತು ಸ್ಥಿರತೆಯ ಉದ್ದೇಶದಿಂದ ಸರ್ಕಾರವು ತನ್ನ ಆದಾಯ ವೆಚ್ಚ ಸಾಲಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಅನುಸರಿಸುವ ನೀತಿಯನ್ನು ಕೋಶಿಯನೀತಿ ಎನ್ನುವರು.

**8) ವಿತ್ತೀಯ ಕೊರತೆ ಎಂದರೇನು?**
ಉತ್ತರ : ಸರ್ಕಾರದ ಕಂದಾಯ ಆದಾಯ ಮತ್ತು ಸಾಲೇತರ ಬಂಡವಾಳ ಆದಾಯಗಳಿಗಿಂತ ಸರ್ಕಾರದ ಒಟ್ಟು ವೆಚ್ಚ ಹೆಚ್ಚಾಗಿದ್ದರೆ ಅದನ್ನು ವಿತ್ತೀಯ ಕೊರತೆ ಎನ್ನುವರು.
ವಿತ್ತೀಯಕೊರತೆ = (ಕಂದಾಯ ಆದಾಯ+ಸಾಲೆತರ ಬಂಡವಾಳ ಆದಾಯ) – ಒಟ್ಟು ವೆಚ್ಚ

**9) ಕೇಂದ್ರ ಸರ್ಕಾರವು ಸಂಗ್ರಹಿಸುವ ತೆರಿಗೆಯೇತರ ಆದಾಯದ ಮೂಲಗಳು ಯಾವುವು?**
ಉತ್ತರ : * ಭಾರತೀಯ ರಿಸರ್ವ್ ಬ್ಯಾಂಕ್ ಗಳಿಸುವ ನಿವ್ವಳ ಲಾಭ * ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ * ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ * ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ *ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ * ವಿವಿಧ ರೀತಿಯ ಶುಲ್ಕ ಮತ್ತು ದಂಡಗಳು

**10. ಆಯ-ವ್ಯಯದ ಮೂರು ವಿಧಗಳನ್ನು ವಿವರಿಸಿ.**
ಉತ್ತರ : 1. **ಉಳಿತಾಯ ಆಯ-ವ್ಯಯ:** ಸರ್ಕಾರದ ಆದಾಯವು ಅದರ ವೆಚ್ಚಕ್ಕಿಂತ ಹೆಚ್ಚಾಗಿರುವುದು. 2. **ಕೊರತೆಯ ಆಯ-ವ್ಯಯ:** ಸರ್ಕಾರದ ಆದಾಯಕ್ಕಿಂತ ಅದರ ವೆಚ್ಚ ಹೆಚ್ಚಾಗಿರುವುದು. 3. **ಸಮತೋಲನ ಆಯ-ವ್ಯಯ:** ಸರ್ಕಾರದ ಆದಾಯ ಮತ್ತು ವೆಚ್ಚವು ಸಮಾನಾಗಿರುವುದು.

**11) ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸಿನ ನಡುವೆ ಇರುವ ವ್ಯತ್ಯಾಸಗಳನ್ನು ಬರೆಯಿರಿ?**

| ವೈಯಕ್ತಿಕ ಹಣಕಾಸು | ಸಾರ್ವಜನಿಕ ಹಣಕಾಸು |
|---|---|
| ವ್ಯಕ್ತಿಯ ಆದಾಯ – ವೆಚ್ಚಕ್ಕೆ ಸಂಬಂಧಿಸಿದೆ | ಸರ್ಕಾರದ ಆದಾಯ – ವೆಚ್ಚಕ್ಕೆ ಸಂಬಂಧಿಸಿದೆ |
| ಮೊದಲು ಆದಾಯ ಅಂದಾಜಿಸಿ ವೆಚ್ಚ ಮಾಡಲಾಗುತ್ತದೆ | ವೆಚ್ಚ ಅಂದಾಜು ಮಾಡಿ ಅದಕ್ಕೆ ಅನುಗುಣವಾಗಿ ಆದಾಯ ಹೊಂದಿಸುತ್ತದೆ |
| ಹಣಕಾಸಿನ ವ್ಯವಹಾರ ಗೌಪ್ಯವಾಗಿ ಇಡಲಾಗುತ್ತದೆ | ಶಾಸನ ಸಭೆಯಲ್ಲಿ ಚರ್ಚಿಸಿ ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗುತ್ತದೆ |
| ಉಳಿತಾಯದಿಂದ ಕುಟುಂಬದ ಪ್ರಗತಿಗೆ ಪೂರಕವಾಗುತ್ತದೆ | ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡಿದರೆ ಅದು ಪ್ರಗತಿಗೆ ಪೂರಕವಾಗುತ್ತದೆ |

| ಪ್ರತ್ಯಕ್ಷ ತೆರಿಗೆ | ಪರೋಕ್ಷ ತೆರಿಗೆ |
|---|---|
| ಯಾರ ಮೇಲೆ ಸರ್ಕಾರ ತೆರಿಗೆ ವಿಧಿಸಿದಿಯೋ ಅವರೇ ಪಾವತಿಸುವ ತೆರಿಗೆಯಾಗಿದೆ | ಸರ್ಕಾರ ವಿಧಿಸುವ ತೆರಿಗೆಯನ್ನು ಬೇರೆಯವರ ಮೇಲೆ ವರ್ಗಾಯಿಸಲು ಸಾಧ್ಯವಿರುವ ತೆರಿಗೆ |
| ವ್ಯಕ್ತಿ, ಸಂಸ್ಥೆಯ ವರಮಾನ ಮತ್ತು ಸಂಪತ್ತಿನ ಮೇಲಿನ ತೆರಿಗೆ, ಕಂಪನಿ ತೆರಿಗೆ | ಸರಕು ಮತ್ತು ಸೇವೆಗಳ ಮೇಲೆ ವಿಧಿಸುವ ತೆರಿಗೆ ಅಬಕಾರಿ ತೆರಿಗೆ, ಸೇವಾ ತೆರಿಗೆ, ಆಮದು-ರಫ್ತು ತೆರಿಗೆ |

**12. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ, (ಜೂನ್ 2023, ಏಪ್ರಿಲ್ 2024) ಅಥವಾ ಕೋಶೀಯ ನೀತಿಯ ಮಹತ್ವವೇನು?**
ಉತ್ತರ : 1.ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಸಾಧ್ಯ 2.ಕೃಷಿ, ಸಣ್ಣ ಕೈಗಾರಿಕೆ, ಮೂಲಸೌಕರ್ಯ ಒದಗಿಸಬಹುದು. 3.ನೈಸರ್ಗಿಕ ಸಂಪತ್ತು, ಶ್ರಮ ಮತ್ತು ಭೌತಿಕ ಬಂಡವಾಳದ ಬಳಕೆ ಸಾಧ್ಯ. 4.ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಬಹುದು. 5.ಆರ್ಥಿಕ ಏರಿಳಿತಗಳನ್ನು, ಬೆಲೆಗಳ ಏರಿಳಿತಗಳನ್ನು ನಿಯಂತ್ರಿಸಬಹುದು. 6. ಆರ್ಥಿಕ ಸ್ಥಿರತೆ ಸಾಧ್ಯ. 7 ಆರ್ಥಿಕ ಸಮಾನತೆ ಸಾಧಿಸಬಹುದು. 8. ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ

Grow Your Business With Us
S.M.Traders & Services
Authorised Distributor for ATLAS COPCO Portable Screw Air Compressors for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

# ಸಂಕ್ರಾಂತಿ.... ನವೋತ್ಸಾಹ ನವ ಕಾಂತಿ....

ಭಾರತವು ಹೇಳಿಕೇಳಿ ಹಬ್ಬಗಳ ದೇಶ. ಇಲ್ಲಿ ಆಚರಿಸಲ್ಪಡುವ ಪ್ರತಿಯೊಂದು ಹಬ್ಬಗಳಿಗೂ ಒಂದೊಂದು ವೈಜ್ಞಾನಿಕ ಹಿನ್ನೆಲೆ ಇದೆ. ಆಯಾ ಕಾಲಮಾನಕ್ಕೆ ತಕ್ಕುದಾಗಿ ಹಬ್ಬಗಳನ್ನ ಆಚರಿಸುವುದು ನಮ್ಮ ಪೂರ್ವಜರ ದೂರದೃಷ್ಟಿಗೆ ಹಿಡಿದ ಕನ್ನಡಿ. ಹೀಗೆ ಋತುಮಾನಕ್ಕೆ ತಕ್ಕನಾಗಿ ಸಂಭ್ರಮದ ದೃಷ್ಟಿಯಿಂದಲೂ, ಆರೋಗ್ಯದ ದೃಷ್ಟಿಯಿಂದಲೂ, ಬಾಂಧವ್ಯಗಳ ಬೆಸುಗೆಯ ದೃಷ್ಟಿಯಿಂದಲೂ ಭಾರತದ ತುಂಬೆಲ್ಲ ಆಚರಿಸುವ ಅತ್ಯಂತ ಪ್ರಮುಖ ಹಬ್ಬವೆಂದರೆ ಸಂಕ್ರಾಂತಿ. ಇಂತಹ ವಿಶೇಷ ಹಬ್ಬದ ಹಿನ್ನೆಲೆ, ಮಹತ್ವವನ್ನು ಕುರಿತು ನಾವು ಒಂದಿಷ್ಟು ತಿಳಿಯೋಣ.

ಕ್ಯಾಲೆಂಡರ್ ವರ್ಷದ ಜನವರಿ ಹದಿನಾಲ್ಕು ಅಥವಾ ಹದಿನೈದರಂದು (ಈ ವರ್ಷ ಜನವರಿ 14) ಕೃಷಿಕರ ಸಮೃದ್ಧಿಯ ಸಂಕೇತವಾಗಿ ಬರುವ ಹಬ್ಬ ಈ ಸಂಕ್ರಾಂತಿ. ಸೂರ್ಯನು ಮಕರ ವೃತ್ತದಿಂದ ಕರ್ಕಾಟಕ ವೃತಕ್ಕೆ ತನ್ನ ಪಥವನ್ನು ಬದಲಾಯಿಸುವ ಈ ದಿನವನ್ನು ಮಕರ ಸಂಕ್ರಾಂತಿ ದಿನವೆಂದು, "ಉತ್ತರಾಯಣ ಪುಣ್ಯ ಕಾಲ"ವೆಂದು ಆಚರಿಸುತ್ತಾರೆ. ಮಕರ ಸಂಕ್ರಾಂತಿಯ ಈ ಪುಣ್ಯದ ದಿನದಂದು ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂಬ ನಂಬಿಕೆ ಇದೆ. ಹಾಗೆಯೇ ಈ ದಿವಸ ಮರಣಪ್ರಾಪ್ತಿಯಾದರೆ ಮುಕ್ತಿ ದೊರೆಯುತ್ತದೆಂಬ ನಂಬಿಕೆ ದೀರ್ಘಕಾಲದಿಂದಲೂ ಇದೆ. "ಇಚ್ಛಾ ಮರಣಿಯಾದ ಭೀಷ್ಮರು ಕುರುಕ್ಷೇತ್ರದ ರಣಾಂಗಣದಲ್ಲಿ ಮರಣ ಹೊಂದಲು ಈ ದಿನಕ್ಕಾಗಿ ಕಾದಿದ್ದರೂ" ಎಂದು ಮಹಾಭಾರತ, ಪುರಾಣಗಳಲ್ಲಿ ಉಲ್ಲೇಖವಿದೆ.



ಸಂಕ್ರಾಂತಿಯ ಈ ದಿನದಂದು ಮನೆ ಮಂದಿಯಲ್ಲ ಬೇಗನೆ ಎದ್ದು ಸ್ನಾನಾದಿಗಳನ್ನು ಮುಗಿಸಿ, ವಿಶೇಷವಾಗಿ ಮಹಿಳೆಯರು ಸಗಣಿಯಿಂದ ಮನೆಯ ಅಂಗಳವನ್ನು ಸಾರಿಸಿ, ವಿವಿಧ ರಂಗೋಲಿಗಳನ್ನು ಬಿಡಿಸಿ, ದನದ ಕೊಟ್ಟಿಗೆಗಳಿಗೆ ಸುಣ್ಣ ಮತ್ತು ಜಾಜಿನಿಂದ ಪಟ್ಟೆ ಹಾಕುತ್ತಾರೆ. ಇದರ ಜೊತೆಗೆ ಉತ್ತರಾಣಿ ಕಡ್ಡಿ ಮತ್ತು ಮಾವಿನ ಸೊಪ್ಪನ್ನು ಕೊಟ್ಟಿಗೆಗೆ ಮತ್ತು ಧಾನ್ಯ ತುಂಬಿದ ಕಣಜಕ್ಕಿಟ್ಟು ಪೂಜಿಸುವುದು ಈ ಹಬ್ಬದ ವಿಶೇಷ. ಮೇಲ್ನೋಟಕ್ಕೆ ಇವುಗಳೆಲ್ಲವೂ ಅಲಂಕಾರಿಕ ವಸ್ತುಗಳೆಂದೆನಿಸಿದರು ಸಗಣಿ, ಸುಣ್ಣ, ಜಾಜು, ಉತ್ತರಾಣಿಕಡ್ಡಿ, ಮಾವಿನ ಸೊಪ್ಪುಗಳೆಲ್ಲವೂ ಕೀಟ ನಿವಾರಕಗಳಾಗಿವೆ. ಈ ವಸ್ತುಗಳ ಬಳಕೆಯ ಹಿಂದೆ ನಮ್ಮ ಪೂರ್ವಜರ ಆರೋಗ್ಯ ಪರ ಕಾಳಜಿ ಇರುವುದು ಕಂಡು ಬರುತ್ತದೆ.



ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ

Scan For Digital Colourful
HAMPI TIMES E-paper

ಅತ್ತ ಹೊರಗಡೆ ಅಂಗಳದ ಅಲಂಕಾರವಾಗುತ್ತಿದ್ದರೆ, ಇತ್ತಾ ಅಡುಗೆ ಮನೆಯಲ್ಲಿ ವಿಶೇಷ ಖಾದ್ಯಗಳು ತಯಾರಾಗುತ್ತಿರುತ್ತವೆ. ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಅಂದು, ಎಣ್ಣೆ ಬದನೆಕಾಯಿ, ಕೆಂಪು ಚಟ್ನಿ, ವಿವಿಧ ಕಾಳಿನ ಪಲ್ಯಗಳು, ಗುರೆಳ್ಳು ಅಗಸೆ, ಶೇಂಗಾ ಪುಡಿಗಳು, ಗಟ್ಟಿ ಮೊಸರು, ಎಳ್ಳು ಮತ್ತು ಮೆಣಸಿನ ಕಾಯಿ ಬೀಜಗಳನ್ನು ಹಚ್ಚಿ ಮಾಡಿದ ಸಜ್ಜೆ, ಜೋಳದ ಕಟುಕು ರೊಟ್ಟಿಗಳು, ಜೊತೆ ಜೊತೆಗೆ ಸೌತೆಕಾಯಿ,ಮೂಲಂಗಿ,ಗಜ್ಜರಿ ವಿವಿಧ ಪಚ್ಚಡಿಗಳು, ಸಿಹಿಖಾದ್ಯವಾಗಿ ಹುಗ್ಗಿ,ಹೋಳಿಗೆ... ಜೊತೆಗೆ ಗೆಣಸು ಮತ್ತು ಕುಂಬಳಕಾಯಿಗಳನ್ನು ಕುಚ್ಚಿ, ಅದಕ್ಕೆ ಬೆಲ್ಲದ ಪಾನಕವನ್ನು ತಯಾರಿಸುತ್ತಾರೆ. ಹೀಗೆ ಹಬ್ಬದ ಅಡುಗೆಗಾಗಿ ತರಹಾವೇರಿ ಭಕ್ಷ ಭೋಜ್ಯಗಳನ್ನು ತಯಾರಿಸುತ್ತಾರೆ. ಮೇಲೆ ತಿಳಿಸಿದ ಆಹಾರಗಳಿಗೂ ಹವಾಮಾನ ಬದಲಾವಣೆಗೂ ನೇರ ಸಂಬಂಧವಿದೆ. ಈ ಎಲ್ಲಾ ಆಹಾರಗಳು ಪೌಷ್ಟಿಕ ಮತ್ತು ಔಷಧೀಯ ಗುಣಗಳಿಂದ ಕೂಡಿದ್ದು, ಆರೋಗ್ಯ ವರ್ಧಕವಾಗಿ ಕೆಲಸ ಮಾಡುತ್ತವೆ. ಬದಲಾದ ಕಾಲಮಾನಕ್ಕೆ ಮಾನವನ ದೇಹವನ್ನು ಸಿದ್ಧಗೊಳಿಸುವ ಸಂಜೀವಿನಿಯಾಗಿಯೂ ಈ ಆಹಾರವು ಗುಪ್ತಗಾಮಿನಿಯಂತೆ ಕೆಲಸ ಮಾಡುತ್ತದೆ.

ಈ ದಿವಸದ ಮತ್ತೊಂದು ಪ್ರಮುಖ ಮತ್ತು ವಿಶೇಷ ಆಕರ್ಷಣೆ ಮತ್ತು ಆಚರಣೆ ಎಂದರೆ ಎಳ್ಳು ಬೆಲ್ಲವನ್ನು ಹಂಚುವುದು. ಈ ಎಳ್ಳು ಮತ್ತು ಬೆಲ್ಲದ ಬಳಕೆಯ ಹಿನ್ನೆಲೆಯಲ್ಲಿಯೂ ಒಂದು ಆರೋಗ್ಯ ವಿಜ್ಞಾನವಿದೆ. ಅದೇನೆಂದರೆ ಮೈಮರಗುಟ್ಟುವ ಚಳಿಗಾಲಕ್ಕೆ ಚರ್ಮದ ಕಾಂತಿ ಕಳೆಗುಂದಿರುತ್ತದೆ , ಈ ಎಳ್ಳು ಮತ್ತು ಬೆಲ್ಲಕ್ಕೆ ಚರ್ಮದ ಕಾಂತಿಯನ್ನು ಹೆಚ್ಚಿಸುವ ಗುಣವಿದೆ. ಹಾಗಾಗಿ ಈ ಎಳ್ಳು ಬೆಲ್ಲದ ಬಳಕೆ ನಮ್ಮ ಪೂರ್ವಜರ ಆರೋಗ್ಯ ಪರ ಕಾಳಜಿಗೆ ಮತ್ತೊಂದು ನಿದರ್ಶನ.

ಈ ಸಮಯದಲ್ಲಿ ಎಳ್ಳು ದಾನ ಮಾಡಿದರೆ ಪುಣ್ಯ ಲಭಿಸುವುದೆಂಬ ನಂಬಿಕೆಯೂ ಇದೆ. ಸಂಕ್ರಾಂತಿಯ ಈ ದಿನದಂದು ಎಳ್ಳು ಬೆಲ್ಲವೇ ದೇವರಿಗೆ ನೈವೇದ್ಯ. ಈ ದಿವಸ ಹೊಸ ಬಟ್ಟೆ ತೊಟ್ಟು, ಅಲಂಕಾರಗೊಂಡ ಹೆಣ್ಣು ಮಕ್ಕಳು ಮನೆ ಮನೆಗೆ ತೆರಳಿ ಎಳ್ಳು ಬೆಲ್ಲವ ಕೊಟ್ಟು, "ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡೋಣ "ಎಂದು ಹೇಳುವುದರ ಮೂಲಕ ಸಂಬಂಧಗಳನ್ನು ಗಟ್ಟಿಗೊಳಿಸುವ,ಸಂವಹನವನ್ನು ವೃದ್ಧಿಸುವ, ಬಾಂಧವ್ಯಗಳನ್ನು ಬೆಸೆಯುವ ಹಬ್ಬವಾಗಿ ಆಚರಿಸುತ್ತಾರೆ.

ಯಾವುದೋ ಕಾರಣಗಳಿಂದ ದೂರವಾದವರು,ಪರಸ್ಪರ ಎಳ್ಳು ಬೆಲ್ಲವನ್ನು ಹಂಚಿಕೊಂಡು ಒಂದಾದ ಸಾಕಷ್ಟು ಉದಾಹರಣೆಗಳು ಇವೆ ಎಂದು ಹೇಳುತ್ತಾರೆ ನಮ್ಮ ಹಿರಿಯರು. ಹಾಗೆಯೇ ಜಾತಿ ಮತಗಳನ್ನು ಮೀರಿ, ಎಲ್ಲರೂ ಪರಸ್ಪರ ಎಳ್ಳು ಬೆಲ್ಲ ವಿನಿಮಯ ಮಾಡಿಕೊಳ್ಳುವುದರ ಮೂಲಕ ಸಮರಸದ ಬಾಳಿಗೆ ನಾಂದಿ ಹಾಡುವ ಹಬ್ಬವು ಇದಾಗಿದೆ.

ಸಂಕ್ರಾಂತಿ ವಿಶೇಷವಾಗಿ ಸುಗ್ಗಿ ಹಬ್ಬ. ಹೊಲದ ಬೆಳೆಗಳೆಲ್ಲ ಕಟಾವಾಗಿ ಕಣವನ್ನು,ಕಣಜವನ್ನು ಸೇರುವ ಸಮಯ. ವರ್ಷವಿಡೀ ಕಷ್ಟಪಟ್ಟು ದುಡಿದ ರೈತನಿಗೆ ತನ್ನ ಫಲವನ್ನು, ಫಸಲನ್ನು ನೋಡಿ ಖುಷಿಪಡುವ ಕಾಲ. ಹಾಗಾಗಿ ಈ ದಿವಸ ರೈತರು ತಮ್ಮ ದುಡಿಮೆಗೆ ಹೆಗಲಿಗೆ ಹೆಗಲಾದ ಎತ್ತುಗಳನ್ನು ಮೈ ತೊಳೆದು, ವಿಶೇಷವಾಗಿ ಅಲಂಕರಿಸಿ, ಪೂಜೆ ಮಾಡಿ, ಧನ್ಯತೆಯನ್ನು ಮೆರೆಯುತ್ತಾರೆ. ಊರ ಬಯಲಿನಲ್ಲಿ ಕಿಚ್ಚು ಹಾಕಿ,ದನಗಳನ್ನು ಕಿಚ್ಚು ಹಾಯಿಸಿ ಅವುಗಳ ಮೈನಲ್ಲಿ ಇರಬಹುದಾದ ಉಣ್ಣೆ ಮೊದಲಾದ ಕೀಟಗಳನ್ನು ಬೆಂಕಿಯ ಝಳದಲ್ಲಿ ನಿವಾರಿಸುವ ಕೆಲಸವನ್ನು ಮಾಡುತ್ತಾರೆ. ಇದರಿಂದಾಗಿ ದನ ಕರುಗಳು ನೆಮ್ಮದಿಯಿಂದ ನಿದ್ದೆ ಮಾಡಲು ಸಾಧ್ಯವಾಗುತ್ತದೆ.

ಸಂಕ್ರಾಂತಿಯ ಈ ಸಮಯ ಹವಾಮಾನ ಬದಲಾವಣೆಯ ಸಂಕ್ರಮಣ ಕಾಲ. ಹಾಗಾಗಿಯೇ ನಮ್ಮ ಹಿರಿಯರು ಈ ಸಮಯವನ್ನು "ಶಂಕಿನ ಗಾತ್ರದ ಚಳಿ ಹೋಗಿ, ಸಾಸ್ವಿ ಗಾತ್ರದ ಶೆಖೆ ಹುಟ್ಟೋಕಾಲ" ಅಂದಿದ್ದಾರೆ. ಈ ಸಮಯವು ಮೈಮರಗುಟ್ಟುವ ಚಳಿಯಿಂದ ಚೈತನ್ಯದಾಯಕವಾದ ಬೇಸಿಗೆಯತ್ತ ಸಾಗುವ ಕಾಲವಾಗಿದೆ. ಇಂತಹ ಚೈತನ್ಯಕ್ಕೆ ಕಾರಣನಾದ ಸೂರ್ಯನನ್ನು ಆರಾಧನಾ ರೂಪದಲ್ಲಿ ನಮ್ಮ ಜನಪದರು ಬಹು ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬಂದಿದ್ದಾರೆ.

ಒಟ್ಟಿನಲ್ಲಿ ಸಂಕ್ರಾಂತಿಯು ಮನುಜ ಬಂಧಗಳನ್ನು ಗಟ್ಟಿಗೊಳಿಸುವ,, ಜನಜಾನುವಾರುಗಳ ಆರೋಗ್ಯ ವೃದ್ಧಿಸುವ,ವರ್ಷವಿಡಿ ದುಡಿದ ರೈತನಿಗೆ ಖುಷಿ ಕೊಡುವ ಹಬ್ಬವಾಗಿ ತಲತಲಾಂತರಗಳಿಂದ ಇಂದಿಗೂ ಆಚರಿಸಲ್ಪಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಅಂದಹಾಗೆ ನಾ ಹೇಳೋದೇ ಮರೆತಿದ್ದೆ
"ಬರ್ರಿ, ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡೋಣ" .



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 11-01-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1623.93 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9690 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 73.044 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.98 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.198 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

12-01-2025 – ಭಾನುವಾರ

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ಬ್ರಹ್ಮ |
| ಕರಣ | : ಇಂದ್ರ |
| ಸೂರ್ಯೋದಯ | : 07:11:35 |
| ಸೂರ್ಯಾಸ್ತ | : 17:59:13 |
| ರಾಹು ಕಾಲ | : 16:38–17:59 |
| ಯಮಘಂಡ ಕಾಲ | : 12:35–13:56 |
| ಗುಳಿಕ ಕಾಲ | : 15:17–16:38 |

## ಕೌಶಲ್ಯವಿದ್ದರೆ ಮಾತ್ರ ಸ್ವಯಂ ಉದ್ಯೋಗ ಸಾಧ್ಯ

ಮೂರನೆ ಪುಟದಿಂದ

ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ, ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಪ್ರಯತ್ನ ಪಡಬೇಕು, ನಮ್ಮ ಸಂಸ್ಥೆಯಿಂದ ನೀವು ತರಬೇತಿ ಪಡೆದುಕೊಂಡು ಟೈಲರಿಂಗ್ ಶಾಪ್ ಅಥವಾ ನೀವು ಇನ್ನೊಬ್ಬರಿಗೆ ಹೇಳಿಕೊಟ್ಟಾಗ ಅದು ಇನ್ನಷ್ಟು ಸಾರ್ಥವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಗ್ರಾಮದ ಮುಖಂಡ ನಾಗಪ್ಪ ಮಾತನಾಡಿ, ಎಸ್.ಎಲ್.ಆರ್ ಮೆಟಾಲಿಕ್ಸ್ ಕಂಪನಿಯವರು ನಮ್ಮ ಗ್ರಾಮದ ಮಹಿಳೆಯರಿಗೆ ಹೊಲಿಗೆ ಯಂತ್ರ ತರಬೇತಿ ನೀಡಿದ್ದು ಅನುಕೂಲವಾಗಿದೆ ಇನ್ನಷ್ಟು ನಮ್ಮೂರಿಗೆ ಅನುಕೂಲಗಳನ್ನು ಒದಗಿಸಿ ನಮ್ಮ ಸಹಕಾರ ನಿಮಗೆ ಇರುತ್ತದೆ ಎಂದರು.

ಸ್ತ್ರೀ ಶಕ್ತಿ ಸಂಘದ ತಾಲೂಕು ಅಧ್ಯಕ್ಷರಾದ ಶ್ರೀಮತಿ ಗೋಪಿಕಾ ಅವರು ಮಾತನಾಡಿ ಮಹಿಳೆ ಮನೆಯಲ್ಲಿ ಕುಟುಂಬದ ಸದಸ್ಯರು ದುಡಿದ ಹಣದಲ್ಲಿ ಸಣ್ಣಪುಟ್ಟ ಉಳಿತಾಯ ಮಾಡಿ ಅದನ್ನು ತುರ್ತು ಸಂದರ್ಭದಲ್ಲಿ ಬಳಸುತ್ತಾರೆ. ಹೀಗೆ ಈ ಟೈಲರಿಂಗ್ ತರಬೇತಿ ಪಡೆದು ಅವರು ಸ್ವಉದ್ಯೋಗ ಕಂಡುಕೊಂಡು ಮತ್ತೆ ಅವರು ಉಳಿತಾಯ ಮಾಡುವ ಹಣಕ್ಕೆ ಇದು ಒಂದು ಸ್ವಲ್ಪ ಹಣ ಸೇರಿ ಅದು ದೊಡ್ಡ ಮಟ್ಟದಲ್ಲಿ ಉಳಿತಾಯವಾಗುತ್ತದೆ ಇದರಿಂದ ಅವರ ಕುಟುಂಬದ ಬೆಳವಣಿಗೆಗೆ ಸಹಾಯವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಸದಸ್ಯ ರಮೇಶ್, ಗ್ರಾಮದ ಮುಖಂಡ ವೆಂಕಟೇಶ, ಎಸ್.ಎಲ್. ಆರ್ ಕಂಪನಿಯ ಎ.ಜಿ.ಎಂ. ಶೇಷಸಾಯಿ, ಸಿಬ್ಬಂದಿಗಳಾದ ಪೂಜಾಚೌದರಿ, ಮಲ್ಲಿಕಾರ್ಜುನ ಕೆ, ಶಿವಕುಮಾರ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ (ರಿ) ಸಂಸ್ಥೆಯ ಅಧ್ಯಕ್ಷ ಭೀಮರಾಜ ಯು, ಸಿಬ್ಬಂದಿಗಳಾದ ಇಂದಿರಮ್ಮ, ಭಾಗ್ಯ, ವಿದ್ಯಾರ್ಥಿಗಳಾದ ಸವಿತಾ, ಪೂಜಾ, ನೇತ್ರಾವತಿ, ರಮೀಜಾ ಹಾಗೂ ಇನ್ನಿತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

### ಕೃತಕ ಅಂಗಾಂಗ ಜೋಡಣೆ ಬೃಹತ್ ಜಾಗೃತಿ ಅಭಿಯಾನಕ್ಕೆ ಜಿಲ್ಲಾಧಿಕಾರಿ ನಲಿನ್ ಅತುಲ್ ಚಾಲನೆ

# ವಿಕಲಚೇತನರ ನಡೆ ಸಕಲಚೇತನದ ಕಡೆ

■ ಹಂಪಿ ಟೈಮ್ಸ್ ಕೊಪ್ಪಳ

ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ-2025ರ ಅಂಗವಾಗಿ 'ಸಕಲ ಚೇತನ' ಎಂಬ ಶೀರ್ಷಿಕೆಯ "ವಿಕಲ ಚೇತನನ ನಡೆ ಸಕಲ ಚೇತನದ ಕಡೆ" ಎಂಬ ಘೋಷವಾಕ್ಯದೊಂದಿಗೆ ಶನಿವಾರ ಕೊಪ್ಪಳ ನಗರದಲ್ಲಿ ಹಮ್ಮಿಕೊಂಡ ಕೃತಕ ಅಂಗಾಂಗ ಜೋಡಣೆ ಬೃಹತ್ ಜಾಗೃತಿ ನಡಿಗೆ ಅಭಿಯಾನಕ್ಕೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.



ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಜಿಲ್ಲಾಧಿಕಾರಿಗಳು ಮಾತನಾಡಿ, ದಕ್ಷಿಣ ಭಾರತದ ಕುಂಭಮೇಳ ಖ್ಯಾತಿಯ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಹತ್ತು ದಿನಗಳ ಅವಧಿಯಲ್ಲಿ 20 ಲಕ್ಷ ಹಾಗೂ ರಥೋತ್ಸವಕ್ಕೆ ಐದು ಲಕ್ಷ ಜನ ಸೇರುವುದು ಹೆಮ್ಮೆಯ ವಿಷಯ. ಪ್ರತಿ ವರ್ಷ ಒಂದು ಧ್ಯೇಯ ವಾಕ್ಯದೊಂದಿಗೆ ಆರಂಭವಾಗುವ ಜಾತ್ರೆಯ ನಡೆ ಮಾದರಿಯಾಗಿದೆ. ಈ ಹಿನ್ನೆಯಲ್ಲಿ ಈ ವರ್ಷ 'ಸಕಲಚೇತನ' ಎಂಬ ಸಂಕಲ್ಪದಡಿ ಕೃತಕ ಅಂಗಾಂಗ ಜೋಡಣೆ ಕುರಿತು ಅರಿವು ಮೂಡಿಸಲಾಗುತ್ತಿದೆ. ಅಂಗನವಾಡಿಯಿಂದಲೇ ಜಿಲ್ಲೆಯ ಮಕ್ಕಳಲ್ಲಿ ಅಂಗವಿಕಲತೆ ಪತ್ತೆಹಚ್ಚಿ ಚಿಕಿತ್ಸೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ, ವಿಕಲಚೇತನರಿಗೆ ಕೊರಗು ಬರದಂತೆ ಆತ್ಮ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಅಭಿನವ ಗವಿ ಶ್ರೀಗಳು ಮಾಡುತ್ತಿರುವ ಕಾರ್ಯ ಇಡೀ ದೇಶಕ್ಕೆ ಮಾದರಿಯಾಗಿದೆ. ಶಿಕ್ಷಣ, ಆಹಾರ, ವಸತಿ, ಜಲ ಸಂರಕ್ಷಣೆ ಸೇರಿದಂತೆ ಅನೇಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಮಹತ್ವ ಸಾರುತ್ತಿರುವುದು ಜಿಲ್ಲೆಯ ಹೆಗ್ಗಳಿಕೆಯಾಗಿದೆ ಎಂದರು.

ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿ ಅವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆಯ ಚೇರಮನ್ ವಿಜಯಕುಮಾರ, ಶ್ರೀ ಮಹಾವೀರ ಸಂಸ್ಥೆಯ ಮಹೇಂದ್ರ ಸಿಂಗ್ವಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ, ಕೊಪ್ಪಳ ಡಿವೈಎಸ್ಪಿ ಮುತ್ತಣ್ಣ ಸವರಗೋಳ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕೊಪ್ಪಳ ಜಿಲ್ಲಾ ಶಾಖೆಯ ಚೇರಮನ್ ಸೋಮರೆಡ್ಡಿ ಅಳವಂಡಿ ಅವರು ಕಾರ್ಯಕ್ರಮ ನಿರೂಪಿಸಿದರು.

ಕೊಪ್ಪಳ ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ತಾಲೂಕು ಕ್ರೀಡಾಂಗಣ) ದಿಂದ ಆರಂಭವಾದ ಕೃತಕ ಅಂಗಾಂಗ ಜೋಡಣೆ ಜಾಗೃತಿ ನಡಿಗೆ ಅಶೋಕ ವೃತ್ತ, ಗಡಿಯಾರ ಕಂಬದ ಮೂಲಕ ಶ್ರೀ ಗವಿ ಮಠದವರೆಗೆ ನಡೆಯಿತು. ಇದರಲ್ಲಿ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಕೊಪ್ಪಳ, ಭಾಗ್ಯನಗರದ ವಿವಿಧ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ, ವಿಕಲಚೇತನರ ನಡೆ ಸಕಲಚೇತನದ ಕಡೆ, ಅನುಕಂಪ ಬೇಡ-ಅವಕಾಶ ಕೊಡಿ ಹಾಗೂ ಇತರೆ ಘೋಷಣೆಗಳನ್ನು ಕೂಗಿದರು.

## ಪ್ರತಿಭೆ ಗುರುತಿಸಿ ಪ್ರೋತ್ಸಾಹಿ

ಮೊದಲ ಪುಟದಿಂದ

ರಥ ಸಾಗುವುದಕ್ಕಿಂತ ಮುಂಚೆ ಈ ಅಭಿಯಾನದಲ್ಲಿ ಇಂದು ಸಾವಿರಾರೂ ಸಂಖ್ಯೆಯಲ್ಲಿ ಪಾಲ್ಗೊಂಡ ಮಕ್ಕಳ ಹೆಜ್ಜೆಯ ಗುರುತುಗಳು ಎಲ್ಲರಿಗೂ ದಿಕ್ಸೂಚಿಯಾಗಲಿ. ಮುಂದಿನ ವರ್ಷ ಯಾವ ವಿಷಯದ ಬಗ್ಗೆ ಜಾಥಾ ಮತ್ತು ಕೆಲಸ ಮಾಡಬೇಕು ಎಂಬುವುದನ್ನು ವಿದ್ಯಾರ್ಥಿಗಳೇ ಸಲಹೆ ನೀಡಬೇಕು.ಆಯ್ಕೆಯಾಗುವವಿಷಯವನ್ನುತಿಳಿಸಿದವಿದ್ಯಾರ್ಥಿಯಿಂದಲೇ ಮುಂದಿನ ವರ್ಷದ ಜಾಥಾ ಕಾರ್ಯಕ್ರಮ ಉದ್ಘಾಟಿಸಲಾಗುವುದು ಎಂದು ಶ್ರೀಗಳು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

**ಬಹುಮಾನ ವಿತರಣೆ:** ಈ ಜಾಗೃತಿ ಅಭಿಯಾನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡ ಲಾಯಿತು.

ಈ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ಕೊಪ್ಪಳ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಎಸ್ ಶಂಕ್ರಯ್ಯ, ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಪುಷ್ಪಾವತಿ, ಹುಬ್ಬಳ್ಳಿಯ ಶ್ರೀ ಮಹಾವೀರ ಲಿಂಬ್ ಸಂಸ್ಥೆಯ ಮಹೇಂದ್ರ ಸಿಂಗ್ವಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆಯ ಚೇರಮನ್ ವಿಜಯಕುಮಾರ ಹಾಗೂ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038